ವಾನಸಿ

ತಿಂಗಳ ಪತ್ರಿಕೆ

ಜುಲೈ : 2001

ಮಹಿಳೆಯರು ಮತ್ತು ಮತೀಯವಾದ : ಕತ್ತಲ ದಿನಗಳನ್ನು ಕುರಿತು

✣ ✣ ✣

ಮಗನನ್ನು ಹುಡುಕಿಕೊಡಿ ಇಲ್ಲ ಮಗನ ಹೆಣವನ್ನಾದರೂ ಕೊಡಿ

✣ ✣ ✣

ಇನ್ನೊಂದು ಪಾಕಿಸ್ತಾನದ ನೋಟಗಳು

✣ ✣ ✣

ಮೌನ ಮುರಿದು ಲೈಂಗಿಕ ಶೋಷಿತರು ಮಾತನಾಡಿದಾಗ

✣ ✣ ✣

ಕಾಡುಗುಡಿ ಸ್ವಸಹಾಯ ಗುಂಪುಗಳ ವಾರ್ಷಿಕೋತ್ಸವ.....

ಮಾನಸ

ತಿಂಗಳ ಪತ್ರಿಕೆ

ಸಂಪುಟ : 20 ಸಂಚಿಕೆ : 7

ಜುಲೈ : 2001

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **4-00** ರೂ.

ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಮಹಿಳೆಯರು ಹಾಗೂ ಕೋಮುವಾದಕ್ಕೆ ಸಂಬಂಧಪಟ್ಟಂತೆ ಉಮಾ ಚಕ್ರವರ್ತಿಯವರು ಎತ್ತಿರುವ ಪ್ರಶ್ನೆಗಳು ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಬಹುಮುಖ್ಯವಾದವು. ಮಹಿಳಾ ಚಳುವಳಿಯ ತಾತ್ವಿಕ ನಿಲುವು ಹಾಗೂ ಎದುರಿಸಬೇಕಾದ ಸವಾಲುಗಳ ಬಗ್ಗೆ ಗಂಭೀರವಾದ ಚರ್ಚೆಯನ್ನು ಪ್ರಾರಂಭಿಸಲು ಪೂರಕವಾದ ಒಳನೋಟಗಳನ್ನು ನೀಡಿವೆ.

ಪಿತೃಪ್ರಧಾನತೆಯ ಪ್ರತಿಭಟನೆ ಎಲ್ಲಾ ವರ್ಗ ಜನಾಂಗ, ಜಾತಿಯ ಮಹಿಳೆಯರನ್ನು ಮಹಿಳಾ ಚಳುವಳಿಯ ಮೂಲಕ ಒಂದುಗೂಡಿಸಿರುವುದು ಒಂದು ಐತಿಹಾಸಿಕ ಸತ್ಯ. ಇದು ಮಹಿಳೆಯರು ನಡೆಸಿದ ಸಂಘಟಿತ ಹೋರಾಟದ ನೆಲೆಯಿಂದ ಮೂಡಿಬಂದ ಸತ್ಯವಾಗಿದೆ. ಪಿತೃಪ್ರಧಾನತೆಯ ಸಂಕೀರ್ಣತೆ ಬದಲಾಗುತ್ತಿರುವ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಿತಿಯೊಂದಿಗೆ ತಳುಕು ಹಾಕಿಕೊಳ್ಳುವ, ಹಾಗೂ ಅದರ ಭಿನ್ನ ಸ್ವರೂಪವನ್ನು ಗುರುತಿಸುವಲ್ಲಿ ಮಹಿಳಾ ಚಳುವಳಿ ನಿರಂತರ ಪ್ರಯತ್ನವನ್ನು ನಡೆಸಿದೆ. ವರ್ಗ, ಜಾತಿ, ಕೋಮು ಗಲಭೆಗಳಲ್ಲಿ ಸ್ತ್ರೀಯರು ಬಲಿಪಶುಗಳಾಗಿರುತ್ತಿದ್ದರೂ, ಕೇವಲ ಮೌನ ವೀಕ್ಷಕರಾಗಿರುತ್ತಿದ್ದರು.

ಆದರೆ ತೀವ್ರಗೊಳ್ಳುತ್ತಿರುವ ಕೋಮುವಾದ ಮಹಿಳೆಯರನ್ನು ವಿಭಜಿಸುವುದು ಮಾತ್ರವಲ್ಲದೆ, ಕೋಮುವಾದದ ಪ್ರತಿಪಾದನೆಯಲ್ಲಿ ಸ್ತ್ರೀಯರು ಮುಂಚೂಣಿಯಲ್ಲಿರುವಂತೆ ತಂತ್ರವನ್ನು ಬಳಸಲಾಗುತ್ತಿದೆ. ಇದು ಸ್ತ್ರೀಯರ ವಿರುದ್ಧ ಸ್ತ್ರೀಯರನ್ನು ಎತ್ತಿಕಟ್ಟುವ ಪಿತೃಪ್ರಧಾನ ರಾಜಕೀಯ ಕುತಂತ್ರವಾಗಿದೆ. ಈ ತಂತ್ರಕ್ಕೆ ಸರಳವಾಗಿ ಮರುಳಾಗುವ ಸ್ತ್ರೀಯರು ತಾವು ನಿರ್ಮಿಸದ ವ್ಯವಸ್ಥೆಗಳ ಸಮರ್ಥನೆಗೆ ದನಿಯಾಗುತ್ತಿದ್ದಾರೆ. ಈ ಮೂಲಕ ಮಹಿಳೆಯರ ಸಮ್ಮತಿಯನ್ನು ಅಧಿಕೃತಗೊಳಿಸಲಾಗುತ್ತಿದೆ. ನಮ್ಮನ್ನು ತುಳಿಯುತ್ತಿರುವ ವ್ಯವಸ್ಥೆಯನ್ನು ನಾವೇ ಬಲಪಡಿಸಿದಂತಾಗುತ್ತದೆ. ಎಲ್ಲಾ ಮೂಲಭೂತವಾದಿ ಧಾರ್ಮಿಕ ನಂಬಿಕೆಗಳು ಇತರ ಕೋಮಿನ ಬಗ್ಗೆ ವಿಷದ ಬೀಜವನ್ನು ಬಿತ್ತುವುದು ಮಾತ್ರವಲ್ಲದೆ, ತನ್ನ ಆಂತರಿಕ ಪಿತೃಪ್ರಧಾನ ರಚನೆಯನ್ನು ಬಲಪಡಿಸುತ್ತಾ ಹೋಗುತ್ತದೆ. ಅಂತಿಮವಾಗಿ ಇದರ ಪರಿಣಾಮವನ್ನು ಸ್ತ್ರೀಯರು ಎದುರಿಸಬೇಕಾಗುತ್ತದೆ. ಸತಿ ಸಮರ್ಥನೆ, ಸ್ತ್ರೀಯರ ಲೈಂಗಿಕತೆ ಹಾಗೂ ವೇಷಭೂಷಣದ ನಿಯಂತ್ರಣ, ಬೆತ್ತಲು ಮಾಡುವ ಪ್ರಕರಣಗಳು ಇದಕ್ಕೆ ನಿದರ್ಶನವಾಗಿದೆ. ಈ ಸಂಕೀರ್ಣ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ನೈತಿಕ ಶಕ್ತಿಯನ್ನು ಮಹಿಳಾ ಚಳುವಳಿ ಬೆಳೆಸಿಕೊಳ್ಳಬೇಕಾಗಿದೆ. ಅದು ಸಾಧ್ಯವಾಗುವುದು ಸ್ಪಷ್ಟವಾದ, ನಿಚ್ಚಳವಾದ ತಾತ್ವಿಕ ನಿಲುವಿನಿಂದ ಕೂಡಿದ ದೃಢವಾದ ನಂಬಿಕೆಯಿಂದ ಮಾತ್ರ.

–ಸಂಪಾದಕೀಯ ಮಂಡಲಿ

ಮಹಿಳೆಯರು ಮತ್ತು ಮತೀಯವಾದ : ಕತ್ತಲ ದಿನಗಳನ್ನು ಕುರಿತು

ಉಮಾಚಕ್ರವರ್ತಿ
ಕನ್ನಡಕ್ಕೆ : ವೆಂ. ವನಜ

ಮತೀಯ ಗಲಭೆಗಳಲ್ಲಿ ಅತ್ಯಂತ ಹೆಚ್ಚು ಸಂಕಷ್ಟಗಳಿಗೀಡಾಗುವವರು ಮಹಿಳೆಯರು ಎಂದು ಮಹಿಳಾ ಗುಂಪುಗಳಾಗಿ ನಾವು ಆಗಾಗ ಹೇಳಿಕೆ ನೀಡುತ್ತಿರುತ್ತೇವೆ. ಕಾರಣ, ಅತ್ಯಂತ ಹೆಚ್ಚು ಬಲಿಯಾಗುವವರು ಅವರಾಗಿರುತ್ತಾರೆ: ಗಂಡಂದಿರು ಕೊಲೆಯಾಗಿರುತ್ತಾರೆ; ತಮ್ಮ ಗಂಡು ಮಕ್ಕಳನ್ನು ಕಳೆದುಕೊಂಡಿರುತ್ತಾರೆ; ತಾವು ಅಪಹೃತರಾಗಿರುತ್ತಾರೆ; ಅತ್ಯಾಚಾರಕ್ಕೊಳಗಾಗಿರುತ್ತಾರೆ. ಇಷ್ಟಾದರೂ ತಾವು ಯಾರನ್ನೂ ಕೊಲ್ಲುವುದಿಲ್ಲ ಅಥವಾ ಅಂಗವಿಕಲರನ್ನಾಗಿ ಮಾಡುವುದಿಲ್ಲ; ಪ್ರಜ್ಞಾಪೂರ್ವಕವಾಗಿ ಕ್ರಿಯೆಗಳಲ್ಲಿ ತೊಡಗುವುದಿಲ್ಲ; ಬದಲಿಗೆ ಕ್ರಿಯೆಗಳು ಅವರ ಮೇಲೆ ನಡೆಯುತ್ತವೆ; ಎಲ್ಲಾ ಮುಗಿದ ಮೇಲೆ ಚೂರುಗಳಿಂದ ಸಮುದಾಯವನ್ನು ಕಟ್ಟುವ ಕೆಲಸವನ್ನು ಅವರಿಗೆ ಬಿಡಲಾಗುತ್ತದೆ. ಇದಿಷ್ಟು ನಾವು ಇಲ್ಲಿಯವರೆಗೆ ಪಡೆದಿರುವ ಕನಿಷ್ಠ ಜ್ಞಾನ. ಮಹಿಳೆಯರು ಮತ್ತು ಮತೀಯವಾದದ ಪ್ರಶ್ನೆಗೆ, ಅದರಲ್ಲೂ ಮೇಲಿನ ಹೇಳಿಕೆಗೆ ನನಗೆ ನಾನೇ ಉತ್ತರಿಸ ಬಯಸುತ್ತೇನೆ. (ಊರ್ವಶಿ ಬುಟಾಲಿಯಾ : 1995)

ಎಪ್ಪತ್ತರ ದಶಕದ ಕೊನೆಯ ಭಾಗ ಮತ್ತು ಎಂಬತ್ತರ ದಶಕದ ಮೊದಲ ಭಾಗಗಳಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಮಹಿಳಾ ಚಳವಳಿಯು ಆರಂಭದ ಹಂತದಲ್ಲಿತ್ತು. ಮಹಿಳೆಯರ ಬದುಕನ್ನೇ ಆವರಿಸಿಕೊಳ್ಳುವುದರಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸುವ 'ಕುಟುಂಬ' ಮತ್ತು 'ಸಮುದಾಯ'ಗಳಲ್ಲಿರುವ ದಮನಕಾರೀ ಆಚರಣೆಗಳ ಮೇಲೆ ಕೇಂದ್ರೀಕೃತಗೊಂಡ ಸವಾಲುಗಳೇ ಮಹಿಳಾ ಗುಂಪುಗಳ ಕಾರ್ಯಕ್ರಮ ಪಟ್ಟಿಗಳಲ್ಲಿ ಹೆಚ್ಚಿನ ಸ್ಥಾನವನ್ನು ಆಕ್ರಮಿಸಿಕೊಂಡಿರುತ್ತಿದ್ದವು. ಧರ್ಮ, ಸಂಪ್ರದಾಯ ಮತ್ತು ಆಚರಣೆಗಳ ಒತ್ತಡ ಮತ್ತು ಅವು ಮಹಿಳೆಯರ ಬದುಕಿಗೆ ಕೊಡುತ್ತಿದ್ದ ಹೊಡೆತಗಳು ಬಹಳಷ್ಟು ಆಚರಣೆಗಳಿಗೆ ಕಾರಣವನ್ನೊದಗಿಸಿದ್ದವು. ಅದರಿಂದಲೇ ಅವುಗಳ ವಿಮರ್ಶೆಯ ಅಗತ್ಯವಿತ್ತು. ಇದೇ ಸಂದರ್ಭದಲ್ಲಿ ಧರ್ಮ ತಮಗೆ ನೆರವಾಗುತ್ತದೆಂದು ಅನೇಕ ಮಹಿಳೆಯರು ಭಾವಿಸುತ್ತಾರೆನ್ನುವುದನ್ನು ಮಹಿಳಾ ಗುಂಪುಗಳು ಗುರುತಿಸಬೇಕಿತ್ತು (ಗೇಬ್ರಿಲ್ ಡಿಟ್ರಿಚ್, 1992). ಮುಖ್ಯವಾಗಿ ಧಾರ್ಮಿಕ ಸಮುದಾಯಗಳಿಗೆ ನಿಕಟ ಸಂಬಂಧ ಹೊಂದಿರುವ ಸಂಸ್ಥೆಗಳ ಮೇಲೆ ಭೌತಿಕವಾಗಿ ಮತ್ತು ಭಾವನಾತ್ಮಕವಾಗಿ ಅವಲಂಬಿಸಿರುವ ಮಹಿಳೆಯರ ಸಂಕೀರ್ಣ ಸ್ಥಾನದಿಂದಾಗಿ ಅವರು ಕುಟುಂಬದಲ್ಲಾಗಲೀ ಅಥವಾ ಕೆಲವು ಪುರುಷರು ಯೋಜಿಸಿದ್ದ ಮತೀಯ ಘರ್ಷಣೆಗಳಲ್ಲಾಗಲೀ ಸದಾ ಪುರುಷರ ಅಧಿಕಾರವನ್ನು ಒಪ್ಪಿಕೊಳ್ಳುವ ಪರಿಸ್ಥಿತಿಯಲ್ಲಿದ್ದ 'ಬಲಿಪಶುಗಳು' ಎಂದು ನಾವು ಭಾವಿಸುವಂತೆ ಮಾಡಿದೆ.

ಇಡೀ ಸಿಖ್ ಸಮುದಾಯ ಎನ್ನುವುದಕ್ಕಿಂತ ಸಿಖ್ ಪುರುಷರನ್ನು ಮಾತ್ರವೇ ನೇರವಾಗಿ ಗುರಿಯನ್ನಾಗಿಟ್ಟುಕೊಂಡಿದ್ದ 1984ರ ಸಿಖ್ ವಿರೋಧಿಯಾದ ವ್ಯವಸ್ಥಿತ ಸಾಮೂಹಿಕ ಹತ್ಯೆ ಮೇಲಿನ ತಿಳಿವಳಿಕೆಗೆ ಪುಷ್ಟಿ ನೀಡುತ್ತದೆ. ಧಾಳಿಕೋರರು ಪುರುಷತ್ವ, ಕಾದಾಡುವ ಗುಂಪುಗಳ ನಡುವೆ ಮುಯ್ಯಿಗೆ ಮುಯ್ಯಿ ಎಂಬಂಥ ಪರಿಣಾಮಕಾರಿ ಭಾಷೆಯನ್ನು ಮೊಟ್ಟಮೊದಲಿಗೆ ಬಳಸಿದ್ದರು. ಅದಾದ ನಂತರ ಪರಕೀಯ ಭಾವನೆ ಹಾಗೂ ಕ್ರೋಧಗಳಿಂದಾಗಿ ಸಿಖ್ ಯುವಕರು ಭಯೋತ್ಪಾದನೆಗೆ ಮೊರೆ ಹೋಗಿದ್ದರು. ಇದು ಮಹಿಳೆಯರು ಮತೀಯ ಘರ್ಷಣೆಯಲ್ಲಿ ಬಲಿಪಶುಗಳಾಗುತ್ತಾರೆನ್ನುವ ಗ್ರಹಿಕೆಯನ್ನು ಬಲಪಡಿಸಿತು. ಅವರು ಹಾಗಿದ್ದುದರಲ್ಲಿ ಸಂದೇಹವೇ ಇಲ್ಲ. ಕೇಂದ್ರ-ರಾಜ್ಯಗಳ ನಡುವಿನ ವಾದವಿವಾದವಾಗಿ ಆರಂಭವಾಗಿ ಮಹಿಳೆಯರು ಅವಸಾನದ ಅಂಚಿಗೆ ತಲುಪಿದರು. ಕೊನೆಗೆ ಅದೊಂದು ಜಾತ್ಯತೀತ ರಾಷ್ಟ್ರದ ದುರಂತಮಯ ಕುಸಿತವಾಗಿ ಮಾರ್ಪಟ್ಟಿತು. ದೆಹಲಿಯ ಬೀದಿ-ಬೀದಿಗಳಲ್ಲಿ, ಗಲ್ಲಿ-ಗಲ್ಲಿಗಳಲ್ಲಿ ಗುಂಪು ಧಾಳಿಗಳು ನಡೆದವು. ತಮ್ಮ ಗಂಡ, ತಂದೆ, ಗಂಡು ಮಕ್ಕಳು ಮತ್ತು ಸೋದರರನ್ನು ಬೀದಿಗೆಳೆದು ತಂದು ಕಣ್ಣೆದುರೇ ಸುಡುವುದನ್ನು ಮಹಿಳೆಯರು ಅಸಹಾಯಕತೆಯಿಂದ ವೀಕ್ಷಿಸಿದರು. ಧಾಳಿಕೋರರ ನಿರ್ದಿಷ್ಟ ಕಾರ್ಯಯೋಜನೆ ಹಾಗೂ ತನ್ನ ಪ್ರಜೆಗಳನ್ನು ರಕ್ಷಿಸದ ಸರಕಾರಗಳಿಂದಾಗಿ ಮಹಿಳೆಯರು ಹೀಗೆ ಬಲಿಪಶುಗಳಾಗಿದ್ದರು; ಎರಡು ಪಟ್ಟು ಬಲಿಪಶುಗಳಾಗಿದ್ದರು. ತಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರು; ಅದರ ಬಗ್ಗೆ ಮಾತಾಡಲು ಮುಂದಾದರು. ತಮ್ಮ ಕುಟುಂಬದ ಪುರುಷರನ್ನು ಕೊಲ್ಲಲು ಅವಕಾಶ ನೀಡಿದ ಅದೇ ಸರಕಾರದಿಂದ ಬದುಕಿನ ನಿರ್ವಹಣೆಗಾಗಿ ಪರಿಹಾರವನ್ನು ಕೇಳಿದರು. ಮಾತೃಪ್ರಧಾನ ಕುಟುಂಬಗಳಂತಾಗಿದ್ದ ತಮ್ಮ ಕುಟುಂಬಗಳಲ್ಲಿ ತಮ್ಮ ಬದುಕನ್ನು ಮತ್ತೆ ರೂಪಿಸಿಕೊಳ್ಳಲು ವರ್ಷಗಳ ಕಾಲ ಹೋರಾಡಿದರು. ತಮ್ಮ ಮತ್ತು ತಮ್ಮ ಮಕ್ಕಳ ಮನಸ್ಸಿಗಾದ ಆಘಾತ ನೋವುಗಳನ್ನು ಸಂಭಾಳಿಸಿದರು. ಬಲಿಪಶುವಾದೆನೆಂಬ ಆಳವಾದ ಪ್ರಜ್ಞೆಯಿಂದ ಬಳಲುತ್ತಿದ್ದ ಒಂದು ಕೋಮಿಗೆ ರಕ್ಷಣೆ ಮತ್ತು ನ್ಯಾಯವನ್ನು ದೊರಕಿಸಿ

ಕೊಡಲು ಸೋತ ಸರಕಾರದ ವಿರುದ್ಧ ಚುನಾವಣಾ ಪ್ರಚಾರ ಮಾಡಲು ಹೊರಟ ಸಿಖ್ ಸಮುದಾಯಕ್ಕೆ ಈ ಮಹಿಳೆಯರು ಸಂಕೇತಗಳಾದರು. ಮಹಿಳೆಯರಂತೆಯೇ ಅವರ ಇಡೀ ಸಮುದಾಯ ಬಲಿಪಶುವಾಗಿತ್ತು. ಇನ್ನೊಂದು ಕಡೆ, ಪರಿಹಾರ, ಪುನರ್ವಸತೀಕರಣ ಮತ್ತು ಮಾನಸಿಕ ಮತ್ತು ಭೌತಿಕ ಬದುಕಿಗೆ ಬೇಕಾದ ಪೂರಕ ಸಾಮಗ್ರಿಗಳನ್ನು ಮಹಿಳಾ ಗುಂಪುಗಳು ಪೂರೈಸುತ್ತಿದ್ದವು. ದ್ವೇಷಪೂರ್ಣ ಸಾಮಾಜಿಕ ಶಕ್ತಿಗಳು ಮಹಿಳೆಯುರನ್ನು ಅತ್ತಿಂದಿತ್ತ ಇತ್ತಿಂದತ್ತ ಕ್ರೂರವಾಗಿ ಎಳೆದಾಡುತ್ತವೆ; ಉಳಿದದ್ದನ್ನು ಗುಡಿಸಿ ಸಾರಿಸುವುದನ್ನು ಬಿಟ್ಟರೆ ಮತ್ತೇನನ್ನೂ ಮಾಡಲು ಮಹಿಳೆಯರು ಅಸಹಾಯಕ ರಾಗಿದ್ದರೆನ್ನುವ ನಂಬಿಕೆಯನ್ನು ಗಟ್ಟಿಗೊಳಿಸಿತು. (ಉಮಾಚಕ್ರವರ್ತಿ : ನಂದಿತ ಹಕ್ಸರ್ : 1987). ಆದರೆ ಸಿಖ್‌ರು ಪರಕೀಯ ಭಾವನೆಯಿಂದಿದ್ದ ಸಂದರ್ಭದಲ್ಲಿ, ಸಿಖ್‌ರು ಮತ್ತಿತರ ಸಮುದಾಯಗಳಲ್ಲಿ, ನಾಗರಿಕ ಸಮಾಜ ಮತೀಯವಾದೀಕರಣ ಗೊಳ್ಳುತ್ತಿದೆ ಎನ್ನುವುದಕ್ಕಿಂತ ಸರಕಾರ ಅದನ್ನು ಮಾಡುತ್ತಿದೆ ಯೆನ್ನುವ ಭಾವನೆಯಿತ್ತು. ಈ ತಿಳಿವಳಿಕೆ ಸಾಧ್ಯವಾದದ್ದು ನಾಗರಿಕ ಗುಂಪುಗಳ ಪ್ರಯತ್ನದಿಂದ. ಅವು 1984ರಲ್ಲಿ ದೆಹಲಿಯಲ್ಲಿ ನಡೆದ ವ್ಯವಸ್ಥಿತ ಹತ್ಯೆಗಳ ಬಗ್ಗೆ ಏಳು ದಿನಗಳೊಳಗೆ ದಾಖಲೆ ಸಹಿತವಾದ ಆರೋಪ ಪಟ್ಟಿಯನ್ನು ಸರಕಾರಕ್ಕೆ ಸಲ್ಲಿಸಿದವು. (ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಮತ್ತು ಪೀಪಲ್ಸ್ ಯೂನಿಯನ್ ಫಾರ್ ಡೆಮಾಕ್ರಟಿಕ್ 'ರೈಟ್ಸ್': 1984). ಮುಯ್ಯಿಗೆ ಮುಯ್ಯಿ ಎಂಬ ಧೋರಣೆಯ ಭಯೋತ್ಪಾದಕ ಚಟುವಟಿಕೆಗಳು ಆ ವ್ಯವಸ್ಥಿತ ಹತ್ಯೆಗೆ ಕಾರಣರೆಂದು ನಂಬಲಾದ ರಾಜಕಾರಣಿಗಳಿಗೆ ಸಂಬಂಧಿಸಿರುವುದನ್ನು ಬಿಂಬಿಸಿದವು; ಹತ್ಯೆ ನಡೆದ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ನಾಗರಿಕರ ವಿರುದ್ಧ ಯಾವುದೇ ಆರೋಪವಿರಲಿಲ್ಲ. ಆದ್ದರಿಂದಲೇ ಉತ್ತರ ಭಾರತದ ಯಾವುದೇ ಸ್ಥಳದಲ್ಲಿ ಹಿಂದೂ-ಸಿಕ್ಖರ ನಡುವೆ ಕಿಚ್ಚು ಹತ್ತಿ ಉರಿಯಲಿಲ್ಲ.

ಎಂಬತ್ತರ ದಶಕದ ಕೊನೆಯಲ್ಲಿ ಮತ್ತು ತೊಂಬತ್ತರ ದಶಕಗಳಲ್ಲಿ ಬಲಪಂಥೀಯ ಬಹುಸಂಖ್ಯಾತ ಧಾರ್ಮಿಕ ಮೂಲಭೂತವಾದೀ ಸಂಘಟನೆಯು ನಮ್ಮ ಈ ತಿಳಿವಳಿಕೆಯನ್ನು ಮತ್ತೊಂದೂ ಹಿಂದಕ್ಕೆ ಬರದಂತೆ ಬದಲಿಸಿದೆ. ಅಯೋಧ್ಯೆಯಲ್ಲಿ ದೇವಾಲಯಕ್ಕಾಗಿ ಸಂಘ ಪರಿವಾರ ರಕ್ತಮಯವಾದ ಪ್ರಚಾರವನ್ನು ಆರಂಭಿಸಿತು. ಅದರ ಭಾಗವಾಗಿ 1989ರಲ್ಲಿ ಬಾಗಲ್ಪುರದಲ್ಲಿ ನಡೆದ ಭಯಾನಕ ಚಳವಳಿಗಳಲ್ಲಿ ಮಹಿಳೆಯರು ಭಾಗವಹಿಸಿದರು. ಅಂದಿನಿಂದ 'ಹಿಂದೂ' ಮಹಿಳೆಯರು ನಾಟಕೀಯವಾಗಿ ದ್ವೇಷದ ಪ್ರಚಾರಕಾರ್ಯ ಮತ್ತು ಕೊಲೆಪಾತಕ ಚಳವಳಿಗಳಲ್ಲಿ ಕ್ರಿಯಾಶೀಲರಾಗಿದ್ದಾರೆ; ಸ್ವಯಿಚ್ಛೆಯಿಂದ ಮಧ್ಯವರ್ತಿಗಳಾಗಿದ್ದಾರೆ. ತಮ್ಮ ಆತಂಕವಾದಿ ಸೋದರರ ಚಿಂತನಾದರ್ಶಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾರೆ. ಮತೀಯವಾದದೊಂದಿಗೆ ಅವರ ಸಂಬಂಧ ಕೇವಲ ಒಂದು ಕೇಂದ್ರದಲ್ಲಿಲ್ಲ; ಅಲ್ಪಸಂಖ್ಯಾತ ಕೋಮುಗಳ ಮಹಿಳೆಯರಾಗಿ ಮತೀಯವಾದಿ ಕ್ರಿಯೆಗಳಿಗೆ ಬಲಿಪಶುಗಳಾಗುವ ಸ್ಥಾನದಲ್ಲಿದ್ದರೂ ಅದು ಯಾವಾಗಲೂ ಅಲ್ಲ; ಪುರುಷರು ಮತ್ತು ಮಹಿಳೆಯರನ್ನು ಬಲಿಪಶುಗಳಾಗಿಸುವ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸುವವರೂ ಆಗಿರುತ್ತಾರೆ. ಅವರ ಸ್ಥಾನಮಾನಗಳ ಸಂಕೀರ್ಣತೆ ಮತ್ತವರ ವೈವಿಧ್ಯಮಯ ಕ್ರಿಯಾ ವಿಧಾನಗಳು ಈಗ ಸ್ಪಷ್ಟವಾಗುತ್ತಿವೆ - ಅವರು ಬಲಿಯಾಗುವವರು ಮತ್ತು ಪ್ರಚೋದಕರು ಎರಡೂ ಆಗಬಲ್ಲರು; ಮಧ್ಯವರ್ತಿಯ ಕೊರತೆ ಹೊಂದಿರುತ್ತಾರೆ; ತಂತಮ್ಮ ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನಗಳಿಗನುಗುಣವಾಗಿ ಅಂಥ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ. ಮಹಿಳೆಯರು ಸ್ವಭಾವತಃ ನಿಷ್ಕ್ರಿಯರು, ಶಾಂತಿಪ್ರಿಯರು ಮತ್ತು ಪೋಷಿಸುವವರು ಎನ್ನುವ ಸಿದ್ಧಮಾದರಿಗಳನ್ನು ಈಗ ಬಿಡಲೇಬೇಕಾಗಿದೆ. ಏಕೆಂದರೆ, ಬಲಪಂಥೀಯ ಧಾರ್ಮಿಕ ಸಂಘಟನೆಯಲ್ಲಿ ಮಹಿಳೆಯರು ಭಾಗವಹಿಸುತ್ತಿರುವ ಕಟುಸತ್ಯವನ್ನು ನಾವು ಒಪ್ಪಿಕೊಳ್ಳಲೇ ಬೇಕಾಗಿದೆ. ಬಾಗಲ್ಪುರ, ಅಹಮದಾಬಾದ್, ಅಯೋಧ್ಯೆ, ಮುಂಬಯಿ ಮತ್ತು ಸೂರತ್‌ಗಳು ಮತೀಯವಾದದೊಂದಿಗೆ ಮಹಿಳೆಯರಿಗೆ ಸಂಬಂಧವನ್ನು ಕುರಿತು ನಾವು ಯೋಚಿಸುವಂತೆ ಮಾಡಿವೆ. ಆ ನಗರಗಳಲ್ಲಾದ ಮತೀಯ ಹಿಂಸೆಯಲ್ಲಿ ಬಲಿಪಶುಗಳು ಮತ್ತು ಮಧ್ಯವರ್ತಿಗಳೆರಡೂ ಸ್ಥಾನಗಳನ್ನು ಮಹಿಳೆಯರು ಪಡೆದಿದ್ದರೆನ್ನುವುದಕ್ಕೆ ಪುರಾವೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಾಮರ್ಶಿಸಬಯಸುತ್ತೇನೆ.

1989ರ ಡಿಸೆಂಬರ್ ಮತ್ತು 1990ರ ಜನವರಿ ತಿಂಗಳುಗಳಲ್ಲಿ ಬಾಗಲ್ಪುರದಲ್ಲಿ ನಡೆದ ಗಲಭೆಗಳು ಮತೀಯ ಹಿಂಸೆಗೆ ಒಂದು ಹೊಸ ಆಯಾಮವನ್ನು ಕೊಟ್ಟವು. ಗಲಭೆಗಳು ಬಾಗಲ್ಪುರದ ಸುತ್ತಮುತ್ತಲ ಹಳ್ಳಿಗಳಿಗೆ ವ್ಯಾಪಿಸಿದ್ದವು; ಇದು ವಿಶ್ವ ಹಿಂದೂ ಪರಿಷತ್ತು ಸತತವಾಗಿ ನಡೆಸಿದ ಮತೀಯ ಸಂಘಟನೆಯ ಪರಿಣಾಮವಾಗಿತ್ತು; ಒಂದು ಸಾವಿರಕ್ಕಿಂತಲೂ ಹೆಚ್ಚು ಮಂದಿ ಸತ್ತಿದ್ದರು; ಮಹಿಳೆಯರ ದೇಹಗಳು ಅಂಗವಿಕಲಗೊಂಡಿದ್ದವು. ಭಾರತ-ಪಾಕಿಸ್ತಾನಗಳಾಗಿ ದೇಶ ಇಬ್ಭಾಗವಾದ ನಂತರದ ಅತ್ಯಂತ ವ್ಯಾಪಕವಾದ ಮತೀಯ ದಳ್ಳುರಿ ಇದಾಗಿತ್ತು. ಈ ಹಿಂಸೆಯಲ್ಲಿ ಬದುಕುಳಿದು ಶಿಬಿರಗಳಲ್ಲಿದ್ದ ಮಹಿಳೆಯರು ತಾವು ಕಂಡ ಘಟನೆಗಳಿಂದ ದಿಗ್ಭ್ರಮೆಗೊಂಡಿದ್ದರು; ಭವಿಷ್ಯದ ಅನಿಶ್ಚಿತತೆ ಮತ್ತು ಅರಕ್ಷಿತತೆಗಳ ಬಗ್ಗೆ ಬಹಳ ಚಿಂತಿತರಾಗಿದ್ದರು. ಅವರು ಪ್ರತ್ಯಕ್ಷ ಹಾಗೂ ಅರಕ್ಷಿತತೆಗಳ ಬಗ್ಗೆ ಬಹಳ ಚಿಂತಿತರಾಗಿದ್ದರು. ಅವರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹಿಂಸೆಯ

ಬಲಿಪಶುಗಳಾಗಿದ್ದರು. ಅದರ ಬಗ್ಗೆ ತನಿಖೆ ಮಾಡುತ್ತಿದ್ದ ನಮ್ಮಲ್ಲಿ ಕೆಲವರಿಗೆ ಮುಸ್ಲಿಮರ ವಿರುದ್ಧ ತಮ್ಮ ಪುರುಷರು ನಡೆಸಿದ ಹಿಂಸೆಯಲ್ಲಿ ಕೆಲವು ಹಿಂದೂ ಮಹಿಳೆಯರು ಭಾಗವಹಿಸುತ್ತಿರುವುದಕ್ಕೆ ಮೊಟ್ಟಮೊದಲಿಗೆ ಪುರಾವೆ ದೊರಕಿತ್ತು. ಪ್ರತ್ಯಕ್ಷದರ್ಶಿಗಳ ಹೇಳಿಕೆಯಂತೆ, ಮಹಿಳೆಯರು ಪುರುಷರನ್ನು ಕೊಲ್ಲುವಂತೆ ಪ್ರೇರೇಪಿಸುತ್ತಿದ್ದರು; ನಿರ್ದೇಶಿಸುತ್ತಿದ್ದರು; ರಕ್ತದ ಕಲೆಗಳನ್ನು ತೊಳೆಯಲು ಮತ್ತಿತರ ಪುರಾವೆಗಳನ್ನು ನಾಶಮಾಡಲು ನೆರವಾಗಿದ್ದರು. ಮೊಹಲ್ಲಾವೊಂದರಲ್ಲಿ ಹಿಂದೂ ಮಹಿಳೆಯೊಬ್ಬಳು ಗುಂಪುಗಳನ್ನು ಪ್ರಚೋದಿಸಿದ್ದಳು. ಮುದಕನೊಬ್ಬನನ್ನು ಕೊಲ್ಲುವುದಕ್ಕೆ ಬದಲಾಗಿ ಸಂತಾನೋತ್ಪತ್ತಿಯ ಶಕ್ತಿಯನ್ನು ಹೊಂದಿರುವ ಯುವಕನೊಬ್ಬನನ್ನು ಕೊಲ್ಲುವಂತೆ ಪ್ರಚೋದಿಸಿದ್ದಳು. ಇದನ್ನು ಹಿಂಸೆಗೊಳಗಾದವರು ವರದಿ ಮಾಡಿದ್ದರು. ವಿಧವೆಯೊಬ್ಬಳು ಶಾಲಾ ಅಧ್ಯಾಪಕಿಯಾಗಿದ್ದು ಗುಂಪುಗಳಿಂದ ಸುತ್ತುವರಿದಿದ್ದ ತನ್ನ ನೆರೆಯ ಮುಸ್ಲಿಮರಿಗೆ ತನ್ನ ಮನೆಯಲ್ಲಿ ಆಶ್ರಯ ನೀಡಿದಳು. ಇದನ್ನು ತಿಳಿದ ಗುಂಪುಗಳು ಆ ಮನೆಯನ್ನು ತಮ್ಮ ವಶಕ್ಕೆ ಬಿಟ್ಟುಕೊಡುವಂತೆ ಒತ್ತಾಯಿಸಿದವು. ಕೆಲವು ಗಂಟೆಗಳ ಅನಂತರ ಅವಳು ತನ್ನ ಮನೆಗೆ ಹೊರಟಾಗ ಅವಳೊಂದಿಗೆ ಇತರ ಮಹಿಳೆಯರೂ ಇದ್ದರು. ತಾನು ಆಶ್ರಯ ನೀಡಬಯಸಿದ್ದವರಲ್ಲಿ ಕೆಲವರಿನ್ನೂ ಬದುಕಿದ್ದರು; ನೀರನ್ನು ಬೇಡಿದ ಅವರಿಗೆ ನೀರು ಕೊಡಲು ಮುಂದಾದ ಅವಳನ್ನು ಅಲ್ಲಿದ್ದ ಮಹಿಳೆಯರು ಬೈದರು. ಅವರ ದುಷ್ಟತನ ಆ ಜನರ ಮೇಲೆ ಧಾಳಿ ಮಾಡಿ ಹಿಂಸಿಸಿದ ಪುರುಷರ ಮೃಗೀಯತ್ವವನ್ನು ಮೀರಿಸುವಂತಿತ್ತು. ಅವಳದನ್ನು ಮರೆಯುವಂತಿರಲಿಲ್ಲ. ಪತ್ರಿಕೋದ್ಯಮದ ಅದರಲ್ಲೂ ರಾಷ್ಟ್ರೀಯ ಪತ್ರಿಕೆಗಳಲ್ಲಿರುವ ಮಹಿಳೆಯರು ಬಾಗಲ್ಪುರದ ಘಟನೆಗಳನ್ನು ವರದಿ ಮಾಡುವಾಗ ಅಷ್ಟೇ ಪಕ್ಷಪಾತಿಗಳಾಗಿದ್ದರು. 'ಹಿಂದು ಸ್ಥಾನ್ ಟೈಮ್ಸ್' ಪತ್ರಿಕೆಯ ಪಾಟ್ನಾ ಪ್ರಕಟಣೆಯಲ್ಲಿದ್ದ ಸುದೀರ್ಘ ವರದಿಯಲ್ಲಿ, ಹಿಂದೂಗಳು ಬಹುಕಾಲದಿಂದಲೂ ತೊಂದರೆಗೀಡಾದ ಸಮುದಾಯ; ಮುಸ್ಲಿಮರು ಅಪರಾಧೀಕರಣಗೊಂಡ, ಮತೀಯವಾದೀಕರಣಗೊಂಡ ರಾಷ್ಟ್ರವಿರೋಧಿ ಜನಸಮುದಾಯ; ಅವರಿಗಾದ ಅನ್ಯಾಯ ಅವರಿಗೆ ತಕ್ಕದಾದುದು ಎನ್ನುವಂತೆ ಚಿತ್ರಿಸಲಾಗಿತ್ತು. ನಳಿನಿಸಿಂಗ್ ದೂರದರ್ಶನಕ್ಕಾಗಿ ಸಿದ್ಧಪಡಿಸಿದ ಸಚಿತ್ರ ವರದಿಯು ಕಣ್ಕಟ್ಟಿನದಾಗಿತ್ತು. ಅದರಲ್ಲಿ ಹಿಂದು ಮತ್ತು ಮುಸ್ಲಿಂ ಸಮುದಾಯಗಳೆರಡೂ ಈ ಗಲಭೆಗಳಲ್ಲಿ ಸಮಾನವಾದ ತೊಂದರೆಗಳಿಗೀಡಾಗಿದ್ದಾರೆಂದು ತೋರಿಸುವ ಪ್ರಯತ್ನವಿತ್ತು; ಅದೊಂದು ಸತ್ಯದ ಅಣಕವಾಗಿತ್ತು (ಪೀಪಲ್ಸ್ ಯೂನಿಯನ್ ಫಾರ್ ಡೆಮಾಕ್ರಟಿಕ್ ರೈಟ್ಸ್ (PUDR) : 1990).

ಇಂಥ ಇನ್ನಿತರ ಕೃತ್ಯಗಳು ನಮ್ಮ ನೆನಪಿನಲ್ಲಿ ಆಳವಾಗಿ ಬೇರೂರಿವೆ. 'ಸಾಧ್ವಿ' ರೀತಾಂಬರ ರಾಮಜನ್ಮ ಭೂಮಿಯ ಪ್ರಚಾರಾಂದೋಲನದುದ್ದಕ್ಕೂ ಮುಸ್ಲಿಂ ಪುರುಷರ ವಿರುದ್ಧ ಹಿಂದೂ ಪುರುಷರನ್ನು ಸಂಘಟಿಸಲು ವ್ಯವಸ್ಥಿತವಾಗಿ ಅವರನ್ನು ಪ್ರಚೋದಿಸಿದರು. ಅವರು ಧಾಳಿ ಮಾಡುವಂತೆ ಪ್ರೇರೇಪಿಸಲು ಅತ್ಯಂತ ಕೆಟ್ಟ ರೀತಿಯ ಭಾಷಣಗಳನ್ನು ಮಾಡಿದರು. ಅವರ ಕೀರಲುದನಿಯ ಕ್ಯಾಸೆಟ್ಟುಗಳನ್ನು ಗಲಭೆಯ ಅವಧಿಯಲ್ಲಿ ವಾಕರಿಕೆ ಬರುವಷ್ಟು ಕೇಳಬಹುದಾಗಿತ್ತು. ಹೀಗಾಗಿ ಹಿಂದೂ ಪುರುಷರ ಮೇಲಿನ ಅವರ ಪ್ರಭಾವ ಅತಿಯಾಗಿತ್ತು. ದಶಕಗಳವರೆಗೆ ಯಾವುದೇ ಗಲಭೆಗಳಿಲ್ಲದ ಖುರ್ಜಾದಲ್ಲಿ ಹೀಗೇ ಆಯಿತು. (ಉಮಾ ಚಕ್ರವರ್ತಿ : 1992). ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಉರುಳಿದಾಗ ರಿತಾಂಬರ ಮತ್ತು ಉಮಾಭಾರತೀಯರು ಅಲ್ಲಿಯೇ ದೈಹಿಕವಾಗಿ ಹಾಜರಿದ್ದರು; ಸಂಪೂರ್ಣ ಉರುಳಿದ ಮಸೀದಿಯನ್ನು ಕಂಡು ಆನಂದಿಸಿದರು. 1993ರ ಜನವರಿಯಲ್ಲಿ ಮುಂಬಯಿಯಲ್ಲಿ ಶಿವಸೇನೆಯ ಮಹಿಳೆಯರು ಜನರನ್ನು ದೊಂಬಿಗಳಾಗುವಂತೆ ಪ್ರೇರೇಪಿಸಿದರು; ದೊಂಬಿಗಳನ್ನು ತಡೆಗಟ್ಟುವ ಕ್ರಮಘವಾಗಿ ಪೋಲೀಸರು ತಮ್ಮ ಪುರುಷರನ್ನು ಬಂಧಿಸಿದಾಗ ಠಾಣೆಗಳ ಮುಂದೆ ಪ್ರತಿಭಟಿಸಿದರು. ದಲಿತರು ಮತ್ತು ಮುಸ್ಲಿಮರ ಮೇಲಿನ ಹಿಂಸೆಯಲ್ಲಿ ಮೇಲ್ಜಾತಿಯ ಮಹಿಳೆಯರು ಭಾಗವಹಿಸುವುದನ್ನು ಅಹಮದಾಬಾದಿನಲ್ಲಿ ಸ್ವಯಂ ಉದ್ಯೋಗ ಚಳವಳಿಯಲ್ಲಿ ಕ್ರಿಯಾವಂತರಾದ ಮಹಿಳೆಯರು 1986ರಲ್ಲಿ ಹಿಂದಿನಿಂದಲೇ ಗಮನಿಸಿದ್ದಾರೆ. ಮಹಿಳೆಯರ ಮೇಲಿನ ಧಾಳಿ ಮತ್ತು ಅತ್ಯಾಚಾರಗಳು ನಡೆದಿವೆಯೆನ್ನಲಾದ ಸೂರತ್‌ನಲ್ಲಿ ಕೂಡ ಇಂಥ ಪುರಾವೆಗಳು ದೊರಕಿವೆ. ಇದೇ ಸಂದರ್ಭದಲ್ಲಿ ಮಹಿಳೆಯರು ತಮ್ಮ ಸೀರೆ ಮತ್ತು ಮಂಗಳ ಸೂತ್ರಗಳನ್ನು ಬೇರೆ ಕೋಮಿನ ಮಹಿಳೆಯರಿಗೆ ತೊಡಿಸುವ ಮೂಲಕ ಅವರು ಹಿಂದೂಗಳಂತೆ ಕಾಣುವ ಹಾಗೆ ಮಾಡಿ ಅವರು ತಪ್ಪಿಸಿಕೊಳ್ಳಲು ನೆರವಾದ ಬಗೆಗೂ ವರದಿಗಳಿವೆ. ಆದರೆ ಅನಂತರದಲ್ಲಿ ಅವರು ತಾವು ಮಾಡಿದ ಮಾನವೀಯ ಸ್ಪಂದನಗಳ ದಾಖಲೆಗಳನ್ನು ಬಚ್ಚಿಡಬೇಕಾಯಿತು. ಕಾರಣ ಅವರಿಗೆ ತಮ್ಮ ನೆರೆಯ ಪುರುಷರಿಂದ ಬೆದರಿಕೆಗಳು ಬಂದಿದ್ದವು.

ಒಟ್ಟಿನಲ್ಲಿ ಮೇಲಿನ ಘಟನೆಗಳು, ಅಲ್ಪಸಂಖ್ಯಾತ ಮತ್ತು ದುರ್ಬಲ ವರ್ಗದ ಮಹಿಳೆಯರು ಪರಿಸ್ಥಿತಿಗೆ ಬಲಿಯಾಗುತ್ತಿದ್ದಾರೆ; ಅವರು ಅದರ ಭಾಗವಾಗುವುದನ್ನು ಆಯ್ಕೆಮಾಡಿಕೊಂಡಿಲ್ಲ ವೆನ್ನುವುದನ್ನು ತಿಳಿಸುತ್ತವೆ. ಬಹುಸಂಖ್ಯಾತ ಹಿಂದೂ ಕೋಮಿನ ಕೆಲವು ಮಹಿಳೆಯರೂ ಗಲಭೆಯ ಸಂದರ್ಭಗಳಲ್ಲಿ ಒಮ್ಮೊಮ್ಮೆ ಬಲಿಯಾಗುವ ಸಾಧ್ಯತೆಯಿದೆ. ಆದರೂ ಅವರನ್ನು ತಮ್ಮ ಕೋಮಿನ ಪುರುಷರು ಹಿಂಸಾ ಕೃತ್ಯಗಳಿಗೆ ಎಳೆದುತರಲಾಗುತ್ತಿದೆ; ದ್ವೇಷ ಮತ್ತು ಹಿಂಸೆಗಳ ಚಿಂತನಾಕ್ರಮಕ್ಕೆ ಅವರು ಒಪ್ಪಿಗೆ

ನೀಡುತ್ತಿರುವುದಷ್ಟೇ ಅಲ್ಲದೆ ಅಂಥ ಕ್ರಿಯೆಗಳಲ್ಲಿ ಸಂಘಟಿತವಾಗಿ ಕ್ರಿಯಾತ್ಮಕ ರೂಪಗಳಲ್ಲಿರುವುದಕ್ಕೆ ಪುರಾವೆಗಳನ್ನೊದಗಿಸುತ್ತಿದ್ದಾರೆ; ಆ ಮೂಲಕ ಬಲಪಂಥೀಯ ಮತೀಯ ಸಂಘಟನೆಗಳ ಗುರಿಗಳನ್ನು ಗಟ್ಟಿಗೊಳಿಸುತ್ತಿದ್ದಾರೆ. ಇದು ಮತ್ತೆ ಮತ್ತೆ ವಿಷಪೂರಿತವಾಗಿರುತ್ತದೆ. ಅದರ ಪ್ರಮಾಣ ಶಿವಸೇನಾ ನಾಯಕರ ದ್ವೇಷಪೂರ್ಣ ಭಾಷಣಗಳೊಂದಿಗೆ ಮಾತ್ರ ಸಾಟಿಯಾಗಬಲ್ಲದು. ಈ ನಾಯಕರು ತಮ್ಮ ಮಹಿಳಾ ಅನುಯಾಯಿಗಳಿಂದ ಪ್ರಾಮಾಣಿಕತೆಯ ಅತ್ಯಂತ ಉನ್ಮಾದದ ಅಭಿವ್ಯಕ್ತಿಗಳನ್ನು ಪಡೆದುಕೊಳ್ಳುತ್ತಿರುವಂತಿದೆ. ಉದಾಹರಣೆಗೆ, 'ಕಮ್ಯುನಲಿಸಂ ಕಂಬ್ಯಾಟ್'ನಲ್ಲಿ ವಿವರಿಸಿದ ಮುಂಬಯಿಯ ಕಾರ್ಪೊರೇಷನ್ ಸಭಾಂಗಣದಲ್ಲಿ ಮುಸ್ಲಿಂ ಮಹಿಳಾ ಕಾರ್ಪೊರೇಟರ್‌ನ್ನು ನಗ್ನಗೊಳಿಸುವ ಪ್ರಯತ್ನವನ್ನೇ ತೆಗೆದುಕೊಳ್ಳಿ:

ಮುಂಬೈ ಮುನಿಸಿಪಲ್ ಕಾರ್ಪೊರೇಷನ್ನಿನ ಕಾರ್ಪೊರೇಟರ್ ಆದ ವಖರುನ್ನೀಸಾ ಅನ್ಸಾರಿಯವರನ್ನು 2000 ಇಸವಿಯ ಮಾರ್ಚ್, 16ರಂದು ಕಾರ್ಪೊರೇಷನ್ನಿನ ಸಭಾಂಗಣದಲ್ಲಿ ವಿಶಾಖಾ ನಾಯಕ್ ಸೇರಿದಂತೆ ಶಿವಸೇನಾ ಪಕ್ಷದ ಹಲವು ಮಹಿಳಾ ಕಾರ್ಪೊರೇಟರುಗಳು ನಗ್ನಗೊಳಿಸಲು ಮತ್ತು ಕತ್ತು ಹಿಸುಕಲು ಪ್ರಯತ್ನಿಸಿದರು. ಮೇಯರರು, ಅಧ್ಯಕ್ಷರು ಮತ್ತು ಸಭಾಧ್ಯಕ್ಷರು ಅದನ್ನು ಮೌನವಾಗಿ ವೀಕ್ಷಿಸಿದರು. ಕುಮಾರಿ ಅನ್ಸಾರಿಯವರ ಮೇಲೆ ಧಾಳಿ ಮಾಡುತ್ತಲೇ ಸೇನೆಯ ಕಾರ್ಪೊರೇಟರುಗಳು 'ಅವಳನ್ನು ಬೆತ್ತಲೆ ಮಾಡಿ', 'ಬಾಳಾಸಾಹೇಬರ ವಿರುದ್ಧವಾಗಿ ಬಹಳ ಮಾತಾಡುತ್ತಾಳೆ'ಎಂದು ಕಿರಿಚುತ್ತಿದ್ದರು. ದಿಗ್ಭ್ರಮೆಗೊಂಡಿದ್ದ ಅನ್ಸಾರಿಯವರು, 'ನಾನು ಮಹಾಭಾರತದ ದ್ರೌಪದಿ ಎಂಬ ಭಾವನೆ ನನಗಾಯಿತು' ಎಂದು ಅನಂತರ ಪತ್ರಕರ್ತರಿಗೆ ತಿಳಿಸಿದರು. (ಕಮ್ಯುನಲಿಸಂ ಕಂಬ್ಯಾಟ, 2000).

ತಮ್ಮ ದ್ವೇಷಪೂರ್ಣ ಭಾಷಣಗಳಿಂದ ಪ್ರೇಕ್ಷಕರನ್ನು ಪ್ರಚೋದಿಸಿದ ರಿತಾಂಬರ ಮತ್ತು ಉಮಾಭಾರತಿಯಂಥ ಮಹಿಳೆಯರಿಂದ ಆರಂಭವಾಗಿ ಅಂಥ ಭಾಷಣಗಳನ್ನು ಹಿಂಸಾತ್ಮಕ ಕ್ರಿಯೆಗಳಿಗೆ ಪರಿವರ್ತಿಸುತ್ತಿರುವುದನ್ನು ನಾವೀಗ ಕಾಣುತ್ತಿದ್ದೇವೆ. ದಿನದಿಂದ ದಿನಕ್ಕೆ ವಿಸ್ತೃತಗೊಳ್ಳುತ್ತಿರುವ ಹಿಂಸೆಯನ್ನು ಒಪ್ಪಿಕೊಂಡಿರುವ ವರ್ತುಲ ಇದಕ್ಕೆ ಪುರಾವೆಯಾಗಿದೆ. ಸಂಗಾರಿ ಹೇಳುತ್ತಾರೆ :

'1992ರ ಡಿಸೆಂಬರ್ ನಂತರದಲ್ಲಿ ಗಲಭೆಗಳನ್ನು ಪ್ರಚೋದಿಸುವ ವಿಧಾನಗಳ ಹೆಚ್ಚಳದಲ್ಲಿ -ಕ್ಯಾಸೆಟ್ಟುಗಳು, ಚಲನಚಿತ್ರಗಳು, ಕಾಲ್ಪನಿಕ ಕತೆಗಳು, ಬೀದಿ ಘಟನೆಗಳು, ಪೂಜಾ ಸ್ಥಳಗಳು ಲಿಂಗ ವ್ಯವಸ್ಥೆಯ ಯಂತ್ರರಚನೆಗಳು ಎಂದು ಭಾವಿಸಲಾಗುತ್ತದೆ. ಇವರು ಒಟ್ಟು ಬಲಪಂಥೀಯ ಸಂಘಟನೆಯಲ್ಲಿ ಮತೀಯವಾದವನ್ನು ಪ್ರಚೋದಿಸುತ್ತಾರೆ; ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟಗಳೆರಡರಲ್ಲೂ ಸಾಮಾಜಿಕ ಅಸ್ಥಿರತೆಯನ್ನು ಉಳಿಸಿಕೊಂಡು ಹೋಗಲು ದುಡಿಯುತ್ತಾರೆ. ಈ ಬಲಪಂಥೀಯ (ಮಹಿಳೆಯರು ಒಂದು ಅಪಾಯಕಾರಿ ಪಾತ್ರವನ್ನು ವಹಿಸುತ್ತಿರುವ) ಸಂಘಟನೆಯು ಹಿಂಸೆಯನ್ನು ಸಾಮಾಜಿಕ ಅಧಿಕಾರದ ಒಂದು ರೂಪ ಎನ್ನುವಂತೆ ಸಹಜೀಕರಣಗೊಳಿಸಿದೆ......(ಕುಂಕುಮ ಸಂಗಾರಿ, 1999).

ಮೇಲ್ಜಾತಿ-ಮಧ್ಯಮ ವರ್ಗಗಳು ಹಿಂಸೆಯನ್ನು ಒಪ್ಪಿಕೊಂಡಿರುವುದು ಮತ್ತು ಅದು ವ್ಯಾಪಿಸುತ್ತಿರುವುದಕ್ಕೆ ಪುರಾವೆಯನ್ನು ಬುದ್ಧಿಜೀವಿ ವರ್ಗಗಳನೇಕವು ಹಾಗೂ ಪತ್ರಿಕೆಗಳು ಅರ್ಥಮಾಡಿಕೊಳ್ಳಲಿಲ್ಲ. ಇಂದೂ ಕೂಡ ಇದನ್ನು ಕಡೆಗಣಿಸಲಾಗಿದೆ. ಇದಕ್ಕೆ ಸೂಕ್ಷ್ಮ ಸಂವೇದನಾರಹಿತೆಯನ್ನು ಭಾಗಶಃ ಪ್ರೇರೇಪಿಸಲಾಗಿದೆ. ಕಾರಣ ಮೇಲಿನ ಅನೇಕ ಘಟನೆಗಳು ನಡೆದಾಗ ಬಲಪಂಥೀಯ ಸಂಘಟನೆಗಳು ವಾಸ್ತವದಲ್ಲಿ ಅಧಿಕಾರ ಹೊಂದಿರಲಿಲ್ಲ. ಈ ವೈಪರೀತ್ಯದ ತೀವ್ರಗಾಮಿ ಕ್ರಿಯೆಗಳು ಹಿಂದುತ್ವವಾದಿಗಳು ಅಧಿಕಾರಕ್ಕೆ ಬರಲು ಯೋಜಿಸಿದ ಕಾರ್ಯತಂತ್ರಗಳು, ಅಧಿಕಾರ ದೊರೆತ ಕೂಡಲೆ ಮುಸ್ಲಿಮರ ಮೇಲಿನ ಧಾಳಿಗಳು ನಿಲ್ಲುತ್ತವೆಂದು ಉದಾರವಾದಿಗಳನೇಕರು ನಂಬಿದರು. ಬಿಜೆಪಿಯವರು ತಮ್ಮ ಅಧಿಕಾರಾವಧಿಯಲ್ಲಿ ಗಲಭೆಗಳೇ ಆಗಿಲ್ಲವೆಂದು ಹೇಳಿಕೊಳ್ಳುತ್ತಲೇ ಬಂದಿದ್ದಾರೆ. ಈ ಹೇಳಿಕೆ ಕೇವಲ ಸುಳ್ಳಷ್ಟೇ ಅಲ್ಲ, ಗಾಬರಿ ಹುಟ್ಟಿಸುವಂಥದು. ಏಕೆಂದರೆ, ಶಾಂತಿಯನ್ನು ಕಾಪಾಡುವ ಸಾಮರ್ಥ್ಯ ತಮಗೆ ಮಾತ್ರವಿದೆ ಎನ್ನುವ ಸ್ಪಷ್ಟ ಹೇಳಿಕೆ ಇದಾಗಿದೆ. ತಮ್ಮ ಉದ್ದೇಶಕ್ಕೆ ಅಗತ್ಯವಾದಲ್ಲಿ ಗಲಭೆಗಳನ್ನು ಯಾವ ಕ್ಷಣದಲ್ಲಾದರೂ ಮಾಡುವ ಸಾಮರ್ಥ್ಯ ತಮಗೆ ಮಾತ್ರವಿದೆ ಎನ್ನುವುದೇ ಇದರ ಗೂಢಾರ್ಥ. ಇದೊಂದು ಹಸಿಸುಳ್ಳು ಎಂದು ಗುಜರಾತಿನಲ್ಲಿ ನಡೆದ ಹಿಂದುತ್ವದ ಧಾಳಿಗಳು ಹೊಸ ಗುರಿಗಳನ್ನು ತೋರಿಸಿದಾಗ ಗೊತ್ತಾಯಿತು. ಆಂತರಿಕ ಕಲಹಗಳು ಮತ್ತು ನಾಯಕತ್ವದ ತಿಕ್ಕಾಟಗಳ ಜೊತೆಗೇ ಬಿಜೆಪಿ ಸಾಕಷ್ಟು ದೀರ್ಘಕಾಲದಿಂದ ಅಧಿಕಾರದಲ್ಲಿದೆ. 1998 ರಿಂದ ಡಾಂಗ್ಸ ಗಿರಿಜನ ಪ್ರದೇಶಗಳಲ್ಲಿ ಕ್ರಿಶ್ಚಿಯನ್ನರ ಮೇಲೆ ಸರಣಿ ಧಾಳಿಗಳು ನಡೆದಿವೆ. 1999ರ ಡಿಸೆಂಬರ್ ತಿಂಗಳ ಕ್ರಿಸ್‌ಮಸ್ ದಿನದಲ್ಲಿ ಬಾಬರಿ ಮಸೀದಿಯ ಮೇಲಿನ ಧಾಳಿಯ ಮಾದರಿಯಲ್ಲಿ ಚರ್ಚಿನ ಮೇಲೆ ಧಾಳಿ ನಡೆಸುವ ಬೆದರಿಕೆ ಹೆಚ್ಚಿನ ಪ್ರಚಾರ ಪಡೆಯಿತು. ಅದೃಷ್ಟವಶಾತ್ ಇದು ಕಾರ್ಯರೂಪಕ್ಕಿಳಿಯಲಿಲ್ಲ. 'ಬಿಜೆಪಿ ಅಧಿಕಾರದಲ್ಲಿದ್ದಾಗ ಗಲಭೆಗಳ ಬದಲು ಭಯೋತ್ಪಾದನೆ ಇರುತ್ತದೆ' ಎನ್ನುವ ಒಂದು ಹೊಸ ಮಾದರಿಯನ್ನು ಹೊಂದಿದ್ದೇವೆನ್ನುವುದನ್ನು ಈ ಧಾಳಿಗಳು ಸೂಚಿಸುತ್ತವೆ. ಈಗ ನಮ್ಮ ಮುಂದಿರುವ ಪ್ರಶ್ನೆ 'ಇದ್ದಕ್ಕಿದ್ದಂತೆ

ಕ್ರಿಶ್ಚಿಯನ್ನರೇಕೆ ಬಲಪಂಥೀಯ ಧಾಳಿಗೆ ಗುರಿಯಾದರು?' ಎನ್ನುವುದು. ಬಿಜೆಪಿಗೆ ಇರುವ ಒಂದೇ ಒಂದು ಪ್ರತಿಸ್ಪರ್ಧಿ ಪಕ್ಷವೆಂದರೆ ಕಾಂಗ್ರೆಸ್. ಅದರ ನಾಯಕತ್ವವನ್ನು ವಹಿಸಿರುವ ಸೋನಿಯಾ ಗಾಂಧಿಯವರ ವಿದೇಶೀ ಮತ್ತು ಕ್ರಿಶ್ಚಿಯನ್ ಮೂಲಗಳ ಕಡೆ ಗಮನವನ್ನು ಸೆಳೆಯುವುದೇ ಸಂಪೂರ್ಣವಾಗಿ ಈ ಧಾಳಿಗಳ ಉದ್ದೇಶ. ಇದನ್ನು ಒಮ್ಮೆ ಪಾದ್ರಿಯಾಗಿದ್ದ ನನ್ನ ಕ್ರಿಶ್ಚಿಯನ್ ಗೆಳೆಯರೊಬ್ಬರು ನಂಬುತ್ತಾರೆ. ಬಹುಶಃ ಇದು ನಿಜವಿರಬಹುದು. ಆದರೆ ನನ್ನ ಅನಿಸಿಕೆಯೇನೆಂದರೆ, ಕ್ರಿಶ್ಚಿಯನ್ನರ ಮೇಲಿನ ಧಾಳಿಗಳು ಅವರನ್ನು ಗುಡ್ಡಗಾಡು ಪ್ರದೇಶಗಳಿಂದ ಹೊರದೂಡುವ ಪ್ರಯತ್ನವಾಗಿರಬಹುದು. ಏಕೆಂದರೆ ಇಲ್ಲಿ ಸರಕಾರ ಮಾಡಬೇಕಾದುದನ್ನು, ಆದರದು ಮಾಡದೆ ಇರುವುದನ್ನು ಕ್ರಿಶ್ಚಿಯನ್ನರು ಮಾಡುತ್ತಾರೆ - ಶಾಲೆಗಳನ್ನು ನಡೆಸುತ್ತಾರೆ; ಸಮಾಜ ಸೇವಾ ಕಾರ್ಯಗಳನ್ನು ಮಾಡುತ್ತಾರೆ. ತಮ್ಮ ಚುನಾವಣಾ ಕ್ಷೇತ್ರ ಮತ್ತು ತಮ್ಮ ಚಿಂತನಾಕ್ರಮವನ್ನು ವಿಸ್ತರಿಸುವ ವಿಷಯದಲ್ಲಿ ಹಿಂದುತ್ವದ ರಾಜಕೀಯ ಹತಾಶೆಯ ಸ್ಥಿತಿಯನ್ನು ತಲುಪಿದೆ. ಕ್ರಿಶ್ಚಿಯನ್ನರಲ್ಲಿ ಭಯೋತ್ಪಾದನೆಯನ್ನು ಮಾಡುವ ಅವರ ಕಾರ್ಯತಂತ್ರದ ಅತ್ಯಂತ ಕ್ರೂರವಾದ ಮುಖವೆಂದರೆ, ಕ್ರೈಸ್ತ ಸಂನ್ಯಾಸಿನಿಯರ ಮೇಲಿನ ಧಾಳಿಯಾಗಿದೆ. ಇದರಲ್ಲಿ ಅವರ ಮೇಲಿನ ಅತ್ಯಾಚಾರವೂ ಸೇರಿದೆ. ಇದನ್ನು ಭಯೋತ್ಪಾದನೆಯ ಒಂದು ಆಯುಧವನ್ನಾಗಿ ಬಳಸಿಕೊಳ್ಳುವ ಉದ್ದೇಶವಿದೆ. ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಈ ಧಾಳಿಗಳಿಗೂ ಮತ್ತು ತನ್ನೊಂದಿಗೆ ಸಂಬಂಧವಿಟ್ಟುಕೊಂಡಿರುವ ಸಂಘಟನೆಗಳಿಗೂ ಸಂಬಂಧವಿಲ್ಲ ವೆಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ವಿಶ್ವಹಿಂದೂ ಪರಿಷತ್ತಿನ ವಕ್ತಾರರೊಬ್ಬರು ಈ ಧಾಳಿಗಳನ್ನು ಸಮರ್ಥಿಸಿಕೊಂಡಿದ್ದಾರೆ; ಅವುಗಳನ್ನು 'ರಾಷ್ಟ್ರವಿರೋಧಿ ಶಕ್ತಿಗಳ ವಿರುದ್ಧದ ದೇಶಪ್ರೇಮಿ ಯುವಕರ ಪ್ರಾಮಾಣಿಕ ಕ್ರೋಧ ಎನ್ನುತ್ತಾರೆ. (ಹಿಂದೂ, 1998). ಆದರೆ ಹಿಂದುತ್ವದ ಪರವಾಗಿರುವ ಮಹಿಳಾ ಗುಂಪುಗಳಾಗಲೀ ಅಥವಾ ಉರಿಯುವ ಕೊಳ್ಳಿ, ತೋರಿಕೆಯ ಸ್ತ್ರೀವಾದಿ ನೇತಾರರಾದ ಉಮಾಭಾರತಿ ಯಾಗಲೀ ಈ ಧಾಳಿಗಳನ್ನು ಖಂಡಿಸಿಲ್ಲ. ಈ ಅಸಹಾಯ ಸಂನ್ಯಾಸಿನಿಯರ ಪರವಾಗಿ ಮಹಿಳಾ ಗುಂಪುಗಳ ಕಾಳಜಿ ಮತ್ತು ಬೆಂಬಲ ಪೂರ್ಣ ಹೇಳಿಕೆ 'ವುಮೆನ್ ಸ್ಪೀಕ್' ಎಂಬ ದಾಖಲೆಯಾಗಿ ಬಂದಿರುವುದನ್ನು ಮಾತ್ರ ನೋಡಿದ್ದೇನೆ. ಇದಕ್ಕೆ ದೇಶಾದ್ಯಂತ ಅಸಂಖ್ಯಾತ ಮಹಿಳಾ ಗುಂಪುಗಳ ಬೆಂಬಲ ವ್ಯಕ್ತವಾಗಿದೆ. ಇವುಗಳ ದಾಖಲೆ ಉಲ್ಲೇಖಾರ್ಹವಾಗಿದೆ :

"ಕ್ರೈಸ್ತ ಚರ್ಚುಗಳ ಏಣಿಶ್ರೇಣಿಯಲ್ಲಿ ಅತ್ಯಂತ ದುರ್ಬಲ ವರ್ಗವೆಂದರೆ, ಸಂನ್ಯಾಸಿನಿಯರು. ಇವರು ಸಂಘ ಪರಿವಾರ (ಬದಲಿಗೆ 'ಮಾಫಿಯಾ' ಎಂದು ಓದಿಕೊಳ್ಳಿ)ದವರ ಧಾಳಿಗೆ ವಿಶೇಷ ಗುರಿಯಾಗಿದ್ದಾರೆ. ಮಹಿಳೆಯರ ಶೀಲ ಮತ್ತು ಪಾವಿತ್ರ್ಯವನ್ನು ಕಾಪಾಡುವವರು ಅಸಹಾಯಕ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವಾಗ, ಅವರ ಮೇಲೆ ಉಗಿಯುವಾಗ ಅಥವಾ ಅವರ ಬಾಯಿಗೆ ಮೂತ್ರವಿಸರ್ಜನೆ ಮಾಡುವಾಗ ಯಾವುದೇ ಪಾಪಪ್ರಜ್ಞೆಯನ್ನೂ ಹೊಂದಿರುವುದಿಲ್ಲ. ಅಧಿಕಾರದಲ್ಲಿರುವ ಬಿಜೆಪಿ ಒಂದಾದರೂ ಪ್ರಕರಣದಲ್ಲಿ ಅಪರಾಧಿಗಳನ್ನು ಗುರುತಿಸಿ ಅವರ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳುವ ಕೆಲಸವನ್ನು ಮಾಡಿಲ್ಲ. (ಬದಲಿಗೆ) ಧಾಳಿಗೊಳಗಾದವರು ಸಂನ್ಯಾಸಿನಿಯರು ಎಂಬ ಕಾರಣವನ್ನೇ ದೊಡ್ಡದು ಮಾಡಿ ಅತ್ಯಾಚಾರದ ಪ್ರಕರಣವನ್ನು ಅಲ್ಪಸಂಖ್ಯಾತರ ದೃಷ್ಟಿಕೋನದಿಂದ ಅರ್ಥೈಸುತ್ತಿದೆ ಎಂದು ಕ್ರೈಸ್ತ ಸಮುದಾಯದ ಮೇಲೆ ಆರೋಪಿಸಿದೆ. ತೆಸಗಿದ್ದ ಸಾಂಪ್ರದಾಯಿಕ ಬೆಂಬಲ ವ್ಯವಸ್ಥೆಗಳನ್ನು ತ್ಯಜಿಸಿ, ತನ್ನ ರಕ್ಷಣೆಯನ್ನು ತಾನು ಸೇವೆ ಮಾಡುವ ಸಮುದಾಯಕ್ಕೆ ನಂಬಿಕೆಯಿಂದ ಒಪ್ಪಿಸುವ ಸಂನ್ಯಾಸಿನಿಯರ ಅತ್ಯಂತ ಅಸಹಾಯಕ ಪರಿಸ್ಥಿತಿಯ ಬಗ್ಗೆ ಅವರು ಏನನ್ನೂ ಹೇಳುವುದಿಲ್ಲ. ಸಂನ್ಯಾಸಿನಿಯರ ಮೇಲೆ ನಡೆಸುವ ಅತ್ಯಾಚಾರ ಸ್ವರಕ್ಷಣೆ ಮಾಡಿಕೊಳ್ಳಲಾಗದ ಮಗುವಿನ ಮೇಲೆ ಅತ್ಯಾಚಾರ ಮಾಡಿದಂತೆ" (ವುಮೆನ್ ಸ್ಪೀಕ್ : 2000).

ಇನ್ನೊಂದು ಹಂತದಲ್ಲಿ, ಹಿಂದೂ ಕುಟುಂಬದಲ್ಲಿ ಮಹಿಳೆಯರು ಲೈಂಗಿಕತೆಯ ನಿಯಂತ್ರಣದ ಪ್ರಶ್ನೆಯನ್ನು ಸ್ತ್ರೀವಾದಿಗಳು ಎತ್ತಿರುವುದಕ್ಕೆ ಸಂಬಂಧಿಸಿದ ಸವಾಲುಗಳ ವಿರುದ್ಧ ಹಿಂದುತ್ವದ ಒತ್ತಡ ಗುಂಪುಗಳು ಧಾಳಿ ಮಾಡಿದ್ದಾರೆ. ಇದು ಪರೋಕ್ಷವಾಗಿದೆ. ಇದು ಸಂಘ ಪರಿವಾರದವರು ನಿರ್ವಚಿಸುವಂತೆ, 'ಸಂಪ್ರದಾಯ' ಮತ್ತು 'ಭಾರತೀಯ' ಸಂಸ್ಕೃತಿಗಳ ಭಾವನಾತ್ಮಕ ಪ್ರಶ್ನೆಯ ಸುತ್ತ ಇರುವಂತೆ ಚಾಣಾಕ್ಷತೆಯಿಂದ ಮಾಡಲಾಗಿದೆ. ಇದು ಎರಡು ಚಲನಚಿತ್ರಗಳ 'ಫೈರ್' ಮತ್ತು ಇತ್ತೀಚೆಗೆ ವಾರಣಾಸಿಯಲ್ಲಿ 'ವಾಟರ್' ಎಂಬ ಚಿತ್ರದ ಚಿತ್ರೀಕರಣವನ್ನು ನಿಲ್ಲಿಸುವ ಅಯಶಸ್ವೀ ಪ್ರಯತ್ನದ ಸಂದರ್ಭಗಳಲ್ಲಿ ನಡೆದಿದೆ. 'ಫೈರ್' ಚಿತ್ರ ಪ್ರದರ್ಶನಗೊಳ್ಳುವುದನ್ನು ತಡೆಯಲು ಬೀದಿಶಕ್ತಿಯನ್ನು ಬಲವಂತವಾಗಿ ಬಳಸಿಕೊಳ್ಳುವಂಥ ಹಿಂಸಾತ್ಮಕ ಆರಂಭವನ್ನು ಮಾಡಲಾಯಿತು. ಈ ಚಿತ್ರ ಒಂದು ಮಧ್ಯಮ ವರ್ಗದ ಹಿಂದೂ ಕುಟುಂಬದ ಇಬ್ಬರು ಮಹಿಳೆಯರ ನಡುವಿನ ಸಲಿಂಗ ಸಂಬಂಧವನ್ನು ಕುರಿತಾಗಿದೆ. ಇದಕ್ಕೆ ಸೆನ್ಸಾರ್ ಮಂಡಳಿಯು 'ಎ' ಸರ್ಟಿಫಿಕೇಟನ್ನು ನೀಡಿತ್ತು. ಗಮನಾರ್ಹ ಸಂಗತಿಯೆಂದರೆ, 'ಫೈರ್' ಚಿತ್ರದ ಪ್ರದರ್ಶನ ವಿರೋಧೀ ಧಾಳಿಗಳಲ್ಲಿ ಧಾಳಿಕೋರರ ಗುಂಪಿನಲ್ಲಿ ಮಹಿಳೆಯರೂ ಇದ್ದುದು. ಅವರ ಹಿಂಸಾತ್ಮಕ ಕ್ರಿಯೆಗಳು ಭಾರತೀಯ ಸಂಸ್ಕೃತಿಯ ರಕ್ಷಣೆಯ ಉದ್ದೇಶವನ್ನು ಹೊಂದಿದ್ದವು. ಮಹಿಳಾ

ಸಲಿಂಗಕಾಮಿಗಳು ಪಶ್ಚಿಮೀಕರಣ ಗೊಂಡವರು ಮತ್ತು ಭ್ರಷ್ಟರು; ಭಾರತೀಯ ಸಂಸ್ಕೃತಿಗೆ ಕೆಟ್ಟ ಹೆಸರನ್ನು ತರುತ್ತಿರುವವರೆಂದು ಭಾಷಣಗಳು ಮತ್ತು ಕ್ರಿಯೆಗಳನ್ನು ಅಧ್ಯಯನ ಮಾಡುತ್ತಿರುವ ತನಿಕಾ ಸರ್ಕಾರ್, ಇಂಥ ತೋರಿಕೆಯ ವಾದಗಳು ಮಹಿಳೆಯರ ಹಕ್ಕುಗಳ ಇಡೀ ಪ್ರಶ್ನೆಯ ಮೇಲೆ ಇನ್ನೂ ಹೆಚ್ಚು ವ್ಯವಸ್ಥಿತವಾದ ಧಾಳಿಗೆ ಒಂದು ಮುಸುಕು ಎಂದು ಭಾವಿಸುತ್ತಾರೆ (ತನಿಕಾ ಸರ್ಕಾರ್ : 1998). 'ಫೈರ್' ಚಿತ್ರ ಬೇರೊಂದು ಕಡೆಯಿಂದ ಮಹಿಳೆಯರ ಹಕ್ಕುಗಳ ಮೇಲೆ ಧಾಳಿ ಮಾಡಲು ಅವರಿಗೆ ಅವಕಾಶವನ್ನು ನೀಡಿತು. ಕಾರಣ, ಮಹಿಳಾ ಸಲಿಂಗಕಾಮಿಗಳು ಅವರಿಗೆ ಸುಲಭದ ಗುರಿಯಾಗಿರುವುದು. 'ಫೈರ್' ಪ್ರಕರಣದಲ್ಲಿ ವಿವಾದವೊಂದನ್ನು ಹುಟ್ಟುಹಾಕಿ ಅದು ಪ್ರದರ್ಶನಗೊಳ್ಳದಂತೆ ತಡೆಯೊಡ್ಡುವ ಯಶಸ್ವೀ ಪ್ರಯತ್ನದ ನಂತರ 'ಭಾರತೀಯ' ಸಂಪ್ರದಾಯದ ರಕ್ಷಕರಿಗೆ 'ವಾಟರ್' ಚಿತ್ರೀಕರಣದ ಪ್ರಕರಣದಲ್ಲಿ ಭಯೋತ್ಪಾದನೆಯ ಆಡಳಿತವನ್ನು ಸೃಷ್ಟಿಸಲು ಸಾಕಷ್ಟು ಧೈರ್ಯವನ್ನು ತಂದುಕೊಟ್ಟಿತು. ಹಿಂದೂ ಹಕ್ಕುಗಳ ಕಾರ್ಯಕ್ರಮ ವಿವರಗಳು ಈಗ ಹೆಚ್ಚು ನಿಚ್ಚಳವಾಗಿವೆ. ಸ್ವಯಮಾಧಿಪತ್ಯ ಹೊಂದಿರುವ ರಾಜ್ಯದಂತೆ ಕಾಣುವ ಉತ್ತರ ಪ್ರದೇಶದಲ್ಲಿ ಕೇಂದ್ರ ಸರಕಾರದ ಆದೇಶಕ್ಕೆ ಕವಡೆ ಬೆಲೆಯೂ ಇಲ್ಲ. ಆ ಧಾಳಿಗಳ ಸಂದೇಶ, ಮಾಡುವ ಬಿಡುವ ಕ್ರಿಯೆಗಳು ಸ್ಫಟಿಕದಷ್ಟು ನಿಚ್ಚಳ. ಮಹಿಳೆಯರ ದಮನ ಹಾಗೂ ಸ್ವಯಂ ವೇದ್ಯವಾದ, ಅತ್ಯುತ್ತಮವಾಗಿ ದಾಖಲಾಗಿರುವ ಹಿಂದೂ ವಿಧವೆಯರ ದಮನವನ್ನು ಕುರಿತಂತೆ ಇನ್ನು ಮುಂದೆ ಚರ್ಚಿಸುವಂತಿಲ್ಲ. ಸಂಘ ಪರಿವಾರದ ಪ್ರಕಾರ, ಅದು ಇರಲಿಲ್ಲ ಹಾಗೂ ಇಲ್ಲವೇ ಇಲ್ಲ. ಇದಕ್ಕೆ ವಿರುದ್ಧವಾದ ನಂಬಿಕೆಯನ್ನು ಯಾರಾದರೂ ಹೊಂದಿದ್ದರೆ ಅವರ ಬಾಯಿಯನ್ನು ಬಲವಂತವಾಗಿ ಮುಚ್ಚಿಸಲಾಗುತ್ತದೆ. ಧಾಳಿಗಳೆಲ್ಲಾ 'ಭಾರತೀಯ' ಸಂಪ್ರದಾಯದ ರಕ್ಷಣೆಗಾಗಿ ಆಗಿರುವುದರಿಂದ ಧಾಳಿಕೋರರಲ್ಲಿ ಮಹಿಳೆಯರೂ ಇದ್ದಾರೆ. ಆ ಧಾಳಿಗಳು ಕಾನೂನು ಸಮ್ಮತಗೊಳ್ಳಲು ಅವರು ಅವುಗಳಲ್ಲಿರುವುದು ಅಗತ್ಯ. ಹಿಂದುತ್ವವಾದಿಗಳು ಕೇವಲ 'ಭಾರತೀಯ' ಮಹಿಳೆಯರ ಹೆಸರಿನಲ್ಲಿ ಕರ್ತವ್ಯಪರವಾಗಿಲ್ಲ; ಭಾರತೀಯ ಮಹಿಳೆಯರ ಬೆಂಬಲವೂ ಅವರಿಗಿದೆ ಎನ್ನುವುದನ್ನು ಸಾದರಪಡಿಸುವುದೂ ಅಗತ್ಯ.

ಕೋಮು ಸಂಘಟನೆಗಳೊಂದಿಗೆ ಮಹಿಳೆಯರ ಸಂಬಂಧ ಮತ್ತು ಅವರು ಅವುಗಳ ಭಾಗವಾಗಿರುವುದರ ಬಗೆಗಿನ ವರದಿಗಳಿಗೆ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತವಾದಿ ಮಹಿಳೆಯರ ಮೊದಲ ಪ್ರತಿಕ್ರಿಯೆ, ತಮ್ಮನ್ನು ತಾವು ಸಂಭಾಳಿಸಿಕೊಳ್ಳುವುದಾಗಿತ್ತು. ಈ ನಿರಾಶಾ ಭಾವನೆಯನ್ನು ಹೆಚ್ಚು ಮಾಡಿದವರು ಎಡಪಂಥೀಯ ಅಥವಾ ಎಡಪಂಥೀಯ ಉದಾರವಾದಿಗಳೆಂದು ಭಾವಿಸುವ ಪುರುಷ ಲೇಖಕರು. ಇವರು ಅಯೋಧ್ಯೆಯ ಪ್ರಚಾರದ ನಂತರ ಒಂದು ಹೆಜ್ಜೆ ಮುಂದೆ ಹೋಗಿ ಈ ಜಾತ್ಯತೀತ ಸಂಪ್ರದಾಯ ವಿರೋಧಿ ಸ್ತ್ರೀವಾದಿಗಳು ಧಾರ್ಮಿಕ ನಂಬಿಕೆಗಳಿಗೆ ಹತ್ತಿರವಿರುವ ಮತ್ತು ಅದರಿಂದಾಗಿಯೇ ಹಿಂದುತ್ವದ ಪರವಾಗಿ ಕ್ರಿಯಾಶೀಲರಾಗಲು ಸಿದ್ಧರಿರುವ ಭಾರತದ ಜನಸಾಮಾನ್ಯ ಮಹಿಳೆಯರನ್ನು ತಲುಪುವುದರಲ್ಲಿ ಸೋತಿದ್ದಾರೆ ಮಾತ್ರವಲ್ಲ, ಅವರೊಂದಿಗೆ ಯಾವುದೇ ತಾಳಮೇಳವಿಲ್ಲ ಎಂದು ವಾದಿಸಿದರು. ಸಂಪ್ರದಾಯ ವಿರೋಧಕ್ಕೆ 'ಪಾಶ್ಚಿಮಾತ್ಯ'ದ ಬಣ್ಣವನ್ನು ಹಚ್ಚಿರುವುದರಿಂದಾಗಿ, ಅಯೋಧ್ಯೆಯ ಪ್ರಕರಣವು ಸಂಪ್ರದಾಯವಾದಿಗಳು ಹಾಗೂ ನಂಬಿಕೆಯುಳ್ಳ 'ಜನಸಾಮಾನ್ಯರು' ತೋರಿದ ಪ್ರತಿಭಟನೆಯ ಒಂದು ಭಾಗವೆಂಬಂತೆ ತೋರುತ್ತದೆ. ಹಿಂದುತ್ವವು ಮಹಿಳೆಯರನ್ನು ಏಣಿಶ್ರೇಣಿಯ ಹಿಂದೂವಾದದ ಎಳೆಯಲ್ಲಿ ಸಂಘಟಿಸುತ್ತದೆ; ಸಾಂಪ್ರದಾಯಿಕ ಹಿಂದೂ ಕುಟುಂಬದ ಆದರ್ಶವನ್ನು ಎತ್ತಿಹಿಡಿಯುತ್ತದೆ ಮತ್ತು ಪಿತೃಪ್ರಧಾನ ಅಧಿಕಾರವನ್ನು ಗಟ್ಟಿಗೊಳಿಸುತ್ತದೆನ್ನುವುದನ್ನು ಸಂಪ್ರದಾಯವಾದಿಗಳು ಕಡೆಗಣಿಸಿದ್ದಾರೆ. ಅಥವಾ ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿದ್ದರು. ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಸ್ತ್ರೀವಾದಿಗಳು ಸಾಂಪ್ರದಾಯಿಕ ಹಿಂದೂ ಚಿಂತನಾಕ್ರಮದ ವಿರುದ್ಧ ಸಂಘಟಿಸುತ್ತಾರೆ. (ಅದು ಮೇಲ್ಜಾತಿಯ ಹಿಂದೂ ಪುರುಷರಿಗೆ ಮೇಲ್ಜಾತಿಯ ಮಹಿಳೆಯರಿಗಿಂತ ಮತ್ತು ದಲಿತ ಜಾತಿಗಳ ಪುರುಷರು ಮತ್ತು ಮಹಿಳೆಯರಿಗಿಂತ ಮೇಲಿನ ಸ್ಥಾನವನ್ನು ಕೊಡಲು ಯಾವುದೇ ಅರ್ಹತೆಯನ್ನು ಹೊಂದಿಲ್ಲ) ಆದ್ದರಿಂದ ಅವರನ್ನು ಸ್ಥಾಪಿತ ಸಾಮಾಜಿಕ ವ್ಯವಸ್ಥೆಗೆ ಧಕ್ಕೆಯುಂಟುಮಾಡುವವರೆಂದು ಭಾವಿಸಲಾಗುತ್ತದೆ. ಈ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಸ್ತ್ರೀವಾದಿಗಳಿಗೆ ಪ್ರಜಾಪ್ರಭುತ್ವವಾದಿ ಚಿಂತನಾದರ್ಶಗಳನ್ನು ಎಲ್ಲೆಡೆ ಬೆಂಬಲಿಸಲು, ಅರಗಿಸಿಕೊಳ್ಳಲು, ಅದರಲ್ಲೂ ಪಿತೃಪ್ರಧಾನಿಕ ಆಚರಣೆಗಳನ್ನು ವಿರೋಧಿಸಲು ಮಹಿಳೆಯರ ಅಗತ್ಯವಿದೆ. ಆದ್ದರಿಂದ ಇವರ ಸ್ಥಾನಮಾನಗಳು ಅಧಿಕಾರದ ಸಾಂಪ್ರದಾಯಿಕ ಅಡಿಪಾಯಕ್ಕೆ ಹೆಚ್ಚು ಅಪಾಯಕಾರಿಯಾಗಿ ಕಂಡುಬರುತ್ತದೆ. ಇದಕ್ಕೆ ವಿರುದ್ಧವಾಗಿ ಮಹಿಳೆಯೊಬ್ಬಳು ಬಲಪಂಥೀಯ ಹಿಂದೂ ಕ್ರಿಯಾವಂತ ಮಹಿಳೆಯಾಗಿ ಏಣಿಶ್ರೇಣಿಯ ಹಿಂದೂ ಕುಟುಂಬದಲ್ಲಿ ಸ್ಥಾನವನ್ನು ಪಡೆಯುವುದು ಸಾಧ್ಯವಿದೆ. ಆದರೆ ಒಬ್ಬ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಕ್ರಿಯಾವಂತ ಮಹಿಳೆಗೆ ಅದು ಅಷ್ಟು ಸುಲಭವಾಗುವುದಿಲ್ಲ. ಹಿಂದುತ್ವದ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿರುವಂತೆ ಕಾಣುವುದು ಕೂಡ (ಎಡಪಂಥೀಯ ಮಹಿಳಾ ಗುಂಪುಗಳು ಕೂಡ ಹೆಚ್ಚು ಸಂಖ್ಯೆಯ ಮಹಿಳೆಯರನ್ನು ಸಂಘಟಿಸುತ್ತಾರಾದ್ದರಿಂದ

ಇದು ನಿಜವಾಗಿರಬೇಕೆಂದಿಲ್ಲ) ಕುಟುಂಬ ಮತ್ತು ಸಮುದಾಯಗಳೊಂದಿಗೆ ಮಹಿಳೆಯರ ಸಂಬಂಧಗಳ ಭೌತಿಕ ಆಯಾಮಗಳ ಒಂದು ಮಗ್ಗುಲಾಗಿದೆ. ಪುರುಷರಿಗೆ ಹೋಲಿಸಿದಾಗ ಮಹಿಳೆಯರು ಸಾಪೇಕ್ಷವಾಗಿ ವಂಚಿತರಾಗಿದ್ದಾರೆ. ಆದರೆ ತಾವು ಅಧಿಕಾರವನ್ನು ಯಾರ ಮೇಲೆ ಚಲಾಯಿಸುತ್ತಾರೋ ಅವರಿಗೆ ಹೋಲಿಸಿದಾಗ ತಮ್ಮ ಪುರುಷರಿಗಿರುವ ಅಧಿಕಾರವನ್ನು ತಾವು ಹಂಚಿಕೊಳ್ಳುತ್ತಾರೆನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ಮಹಿಳೆಯರು ಪುರುಷರಂತೆಯೇ ಗುಂಪುಗಳಾಗಿ ಚದುರಿದಂತಿರುವುದು ಅಗತ್ಯವಾಗುತ್ತದೆ: ಕೋಮು ಕಾರ್ಯಯೋಜನೆಗಳಲ್ಲಿ ಬಲಿಪಶುಗಳಾಗುವ ಮಹಿಳೆಯರಿದ್ದಾರೆ; ತಮ್ಮದೇ ರೀತಿಯಲ್ಲಿ ತಮಗೆ ಸಾಧ್ಯವಾದಷ್ಟು ಅದನ್ನು ನಿರೋಧಿಸುವ ಮಹಿಳೆಯರಿದ್ದಾರೆ; ದ್ವೇಷದ ಚಿಂತನಾಕ್ರಮವನ್ನು ಮತ್ತು ಹಿಂಸೆಯ ಕ್ರಿಯೆಗಳನ್ನು ಒಪ್ಪಿಕೊಳ್ಳುವ ಮಹಿಳೆಯರಿದ್ದಾರೆ. ಈ ಚದುರುವಿಕೆಯು ಲಿಂಗ ನಿರ್ಲಿಪ್ತವಾದುದೆಂದು ವಾದಿಸುವ ಉದ್ದೇಶ ಇಲ್ಲ. ಏಕೆಂದರೆ, ಮಹಿಳೆಯರು ತಾವು ಬಲಿಪಶುವಾಗುವಿಕೆಯನ್ನು ಲಿಂಗವ್ಯವಸ್ಥೆಯ ರೀತಿಯಲ್ಲೇ ಅನುಭವಿಸುತ್ತಾರೆ. ಅದನ್ನು ವಿರೋಧಿಸಿದರೆಂದರೆ ಅವರು ಪುರುಷರಿಂದ ಹೆಚ್ಚು ಒತ್ತಡಕ್ಕೊಳಗಾಗುವ ಸಂಭವವಿರುತ್ತದೆ. ಹಿಂಸೆಯಲ್ಲಿ ಭಾಗಿಯಾಗುವಾಗ, ಆ ಕ್ರಿಯೆಯನ್ನು ತಾವೇ ಮಾಡುವುದಕ್ಕಿಂತ ಹೆಚ್ಚಾಗಿ ಇತರರನ್ನು ಪ್ರೇರೇಪಿಸುತ್ತಾರೆ. ತಮ್ಮ ಪುರುಷರಂತಲ್ಲದೆ ಕ್ರಿಯಾಶೀಲರಾಗುವುದು ಮತ್ತು ತಾವೇ ಯೋಚಿಸುವುದನ್ನು ಆರಂಭಿಸಿದರೆ ಬಲಪಂಥೀಯ ಗುಂಪುಗಳಿಗೆ ಅವರು ಸಂಘಟನೆ ಪಥ್ಯವಾಗುವುದಿಲ್ಲ. ಒಂದು ವೇಳೆ ಆ ಸಂಘಟನೆಯು ಮತೀಯವಾದ ಮತ್ತು ಪಿತೃಪ್ರಧಾನಿಕ ಕಾರ್ಯಯೋಜನೆಯನ್ನು ಬೆಂಬಲಿಸುವುದಕ್ಕಾಗಿ ಮಾತ್ರ ಕಾರ್ಯನಿರತವಾದಲ್ಲಿ ಅದನ್ನು ಒಪ್ಪಿಕೊಳ್ಳಲಾಗುತ್ತದೆ.

ಅಂತಿಮವಾಗಿ, ಕೊನೆಯದೊಂದು ಪ್ರಶ್ನೆಯನ್ನು ಉದ್ದೇಶಿಸಿ ಹೇಳಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರನ್ನು ಸಂಘಟಿಸಲು ಬಲಪಂಥೀಯ ರಾಜಕೀಯ ಸಂಘಟನೆಗಳು ಸತತವಾಗಿ ಪ್ರಯತ್ನಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೇಕೆ? ಇದು ಅನೇಕ ಅಂಶಗಳಿಗೆ ಒಂದು ಪ್ರತಿಕ್ರಿಯೆ ಎಂದು ಭಾವಿಸುತ್ತೇನೆ. ಇದರಲ್ಲಿ ಮಹಿಳಾ ಚಳವಳಿಯ ಶಕ್ತಿ ಮತ್ತು ಗೋಚರತೆಗಳು ಮತ್ತು ದಲಿತ ಮತ್ತು ಗಿರಿಜನ ಸಂಘಟನೆಗಳು ತಮ್ಮನ್ನು ಸಮರ್ಥಿಸಿಕೊಳ್ಳುವುದು ಸೇರಿಕೊಂಡಿವೆ. ಮತೀಯ ಗುಂಪುಗಳು ಸಮುದಾಯಗಳನ್ನು ಲಂಬರೇಖೆಯಲ್ಲಿ ಸಂಘಟಿಸುತ್ತವೆ. ಅದಕ್ಕಾಗಿ ಇತರ ಕೋಮುಗಳ ವಿರುದ್ಧದ ಪ್ರಚಾರಗಳಲ್ಲಿ ಪುರುಷರು ಮತ್ತು ಮಹಿಳೆಯರನ್ನು (ಸಾಧ್ಯವಾದರೆ ದಲಿತರನ್ನು) ಜೊತೆಗೆ ಇಟ್ಟುಕೊಳ್ಳುವುದು ಮುಖ್ಯವಾಗುತ್ತದೆ. ಇದು ಶ್ರೇಣಿಗಳನ್ನು ಮರೆಮಾಚಲು ಮಾತ್ರವಲ್ಲ, ಮತೀಯವಾದಿಗಳು ಕೇವಲ ತಮ್ಮ ಕೋಮಿನ ಹೆಸರಲ್ಲಿ ಮಾತ್ರವಲ್ಲದೆ ಇಡೀ ಸಮುದಾಯದ ಪರವಾಗಿ ಮಾತಾಡುತ್ತಾರೆಂದು ತೋರಿಸಲು ಅಗತ್ಯ. ಕೋಮಿನೊಳಗೆ ಜಾತಿ ಮತ್ತು ಲಿಂಗಾಧಾರಿತವಾದ ಯಾವುದೇ ಬಿರುಕುಗಳಿಲ್ಲ ಎಂದು ಹೇಳುವುದೂ ಅಗತ್ಯ. ಮಹಿಳೆಯರ ವಿಷಯಕ್ಕೆ ಬಂದರೆ, ಬೇರೆ ಕೋಮುಗಳ ವಿರುದ್ಧದ ಪ್ರಚಾರದಲ್ಲಿ ಅವರನ್ನು ಜೊತೆಯಲ್ಲಿಟ್ಟುಕೊಳ್ಳುವುದು ಮತ್ತು ತಮ್ಮ ಚಿಂತನಾಕ್ರಮ ಮತ್ತು ಆಚರಣೆಗಳಲ್ಲಿ ಒಂದು ಮುಖ್ಯವಾದ ಸ್ಥಾನವನ್ನು ನೀಡುವುದು ಅತ್ಯಂತ ಮಹತ್ವದ್ದಾಗುತ್ತದೆ. ಏಕೆಂದರೆ, ಮಹಿಳಾ ಚಳವಳಿಯು ಎತ್ತಿರುವ ಮತ್ತು ಸಾರ್ವಜನಿಕ ಕ್ಷೇತ್ರಕ್ಕೆ ತಂದಿರುವ ಕುಟುಂಬ ಮತ್ತು ಸಮುದಾಯಗಳಲ್ಲಿ ಲಿಂಗಾಧಾರಿತ ಹಿಂಸೆ ಮತ್ತು ತುಳಿತಗಳನ್ನನುಭವಿಸುತ್ತಿರಬಹುದಾದ ಮಹಿಳೆಯರ ಗಮನವನ್ನು ಇದು ಬೇರೆಡೆಗೆ ಸೆಳೆಯುತ್ತದೆ. ತುಳಿತದ ಏಕೈಕ ಗುರಿಯಾದ ಮುಸ್ಲಿಂ ಪುರುಷರ ಮೇಲೆ ಗಮನವನ್ನು ಕೇಂದ್ರೀಕರಿಸಲು ಸಾಧ್ವಿ ರೀತಾಂಬರಿಗಳು ಮತ್ತು ಉಮಾಭಾರತಿಗಳು ಹಿಂದುತ್ವಕ್ಕೆ ಒಂದು ರಾಚನಿಕ ಅಗತ್ಯವಾಗುತ್ತಾರೆ. ಪುರುಷತ್ವ ಮತ್ತು ಷಂಡತನದಂಥ ಭಾಷಾ ಬಳಕೆಯು ಪುರುಷರು ಮತ್ತು ಮಹಿಳೆಯರನ್ನು ಒಂದೇ ಒಂದು ಕೋಮಿನ ಪುರುಷರ ಬಗ್ಗೆ ಹಿಂಸೆ ಮತ್ತು ದ್ವೇಷಗಳ ದಳ್ಳುರಿಯನ್ನು ಹಚ್ಚಿಬಿಡುತ್ತದೆ (ಕುಂಕುಮ ಸಂಗಾರಿ, 1993). ಮಹಿಳಾ ಚಳವಳಿಯು ತನ್ನ ಪ್ರತಿಯೊಂದು ಪ್ರಚಾರಾಂದೋಲನದಲ್ಲೂ ತಮ್ಮದೇ ಕೋಮಿನ ಪುರುಷರು ವಾಸ್ತವದಲ್ಲಿ ದಿನನಿತ್ಯವೂ ಮಹಿಳೆಯರನ್ನು ತುಳಿಯುತ್ತಾರೆನ್ನುವುದನ್ನು ತೋರಿಸಿದೆ. ಅಂಥ ಪುರುಷರನ್ನೇ ರಕ್ಷಕರು, ಎಂದಿಗೂ ತುಳಿಯುವವರಲ್ಲ ಎಂದು ತೋರಿಸಲಾಗುತ್ತದೆ. ಅತ್ಯಂತ ಕೆಟ್ಟದಾದುದೇನೆಂದರೆ, ಮುಸ್ಲಿಂ ಪುರುಷರ ಮೇಲೆ ತಾವು ಆರೋಪಿಸುವ ಧಾಳಿಕೋರ ಸ್ವಭಾವವನ್ನು ಎದುರಿಸುವ ಶಕ್ತಿ ಇವರಿಗಿಲ್ಲ. ಹೆಚ್ಚೆಂದರೆ ಇವರು ಪೋಷಕರ ಶಿಸ್ತನ್ನು ಕಲಿಸುತ್ತಾರೆ. ಇವರ ಮಾರ್ಗದರ್ಶನವಿಲ್ಲದಿದ್ದರೆ ಮಹಿಳೆಯರು ಚದುರಿಹೋಗಬಹುದಾಗಿದೆ.

ಹಿಂದುತ್ವದ ಇಂಥ ನಡವಳಿಕೆಯ ಬಗ್ಗೆ ನಮ್ಮ ಪ್ರತಿಕ್ರಿಯೆ ಹೇಗಿರಬೇಕು? ಅವರ ಕಡೆ ಇರುವ ಸಂಖ್ಯೆಯಿಂದಾಗಿ ನಿರಾಶಾವಾದವಂತೂ ಅಲ್ಲ. ಏಕೆಂದರೆ, ನಾನು ಈಗ ತಾನೇ ಹೇಳಿದಂತೆ ಅದನ್ನು ಉತ್ಪ್ರೇಕ್ಷಿಸಲಾಗುತ್ತದೆ. ಒಂದು ವೇಳೆ ನಾವು ಮಹಿಳೆಯರ ಸಂಕೀರ್ಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದಾದರೆ, ಯಾರನ್ನೂ ಬಲಿ ತೆಗೆದುಕೊಳ್ಳದ, ಹೆಚ್ಚು ಪ್ರಜಾಪ್ರಭುತ್ವವಾದಿ ಮತ್ತು ಸಮಾನತಾತತ್ವಾಧಾರಿತವಾದ, ಸಹನಶೀಲ, ಮಾನವೀಯ ಮತ್ತು ಪಿತೃಪ್ರಧಾನವಲ್ಲದ ಸಮಾಜಕ್ಕಾಗಿ ದುಡಿಯುವ ಅಗತ್ಯವಿದೆಯೆನ್ನುವುದನ್ನು ಕೂಡ ಅರ್ಥ

ಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿ ವ್ಯಕ್ತಿಗಳಾಗಿ ಅಥವಾ ಸಮುದಾಯಗಳಾಗಿ ಯಾರೂ ಬಲಿಯಾಗದಿರುವ ಒಂದು ಭವಿಷ್ಯದೆಡೆಗೆ ಪುರುಷರು ಮತ್ತು ಮಹಿಳೆಯರನ್ನು ತೆಗೆದುಕೊಂಡು ಹೋಗುವುದು ಅಗತ್ಯ. ಬಲಪಂಥ ಮತ್ತು ಉದಾರವಾದಿ ಮೇಲ್ವರ್ಗಗಳೆರಡರಿಂದಲೂ ಸಮಾನತಾ ತತ್ವದ ಗುರಿಗಳು ಅಪಮೌಲ್ಯೀಕರಣಗೊಂಡಿರುವ ಈ ಹಂತದಲ್ಲಿ ದಮನರಹಿತ ಸಮಾಜವನ್ನು ದೂರದ ಗುರಿಯನ್ನಾಗಿ ಇಟ್ಟುಕೊಳ್ಳುವುದೂ ಕಷ್ಟವಾಗಿದೆ. ಆದರೂ ಅದನ್ನು ಮಾಡಲೇಬೇಕು. ಇಲ್ಲಿ ಹಲವಾರು ಚಳವಳಿಗಳಿವೆ; ಕಾರಣ ಭಾರತೀಯ ಸಮಾಜದಲ್ಲಿ ವಿರೋಧಾಭಾಸಗಳೂ ಹಲವಿವೆ; ಮಹಿಳಾ ಚಳವಳಿಯು ಕನಿಷ್ಠ ತನ್ನ ಗ್ರಹಿಕೆಯ ಮಟ್ಟದಲ್ಲಿ - ಯಾವುದೇ ದಿಕ್ಕಿನಿಂದ ಬರುವ ತುಳಿತದ ಪ್ರಮಾಣದ ವಿರುದ್ಧ ಹೋರಾಡುವ ಅಗತ್ಯವಿದೆಯೆನ್ನುವ, ಸೂಕ್ಷ್ಮತೆಯನ್ನು ಹೊಂದಿದೆ. ಇದರಲ್ಲಿ ಒಂದು ಸಂಪೂರ್ಣವಾದ ಹೊಸ ಸಂಸ್ಕೃತಿಗಾಗಿ, ದಬ್ಬಾಳಿಕೆ ಹೊರತಾದ ಸಂಸ್ಕೃತಿಗಾಗಿ ಹೋರಾಟಗಳನ್ನು ರೂಪಿಸಲು ಸೃಜನಾತ್ಮಕ ಕಾರ್ಯಯೋಜನೆಗಳ ಭರವಸೆಗಳನ್ನು ನಾವು ಇಟ್ಟುಕೊಳ್ಳಬಹುದು.

●

ಪರಾಮರ್ಶನ ಗ್ರಂಥಗಳು :

1. ಊರ್ವಶಿ ಬುಟಾಲಿಯಾ, ಅಪ್ರಕಟಿತ ಲೇಖನ : 1995
2. ಗೇಬ್ರಿಯಲ್ ಡಿಟ್ರಿಚ್ : ರಿಫ್ಲೆಕ್ಷನ್ಸ್ ಆನ್ ದಿ ವುಮೆನ್ಸ್ ಮೂವ್‌ಮೆಂಟ್ : ರಿಲಿಜನ್, ಇಕಾನಮಿ ಅಂಡ್ ಡೆವಲಪ್‌ಮೆಂಟ್; ದೆಹಲಿ, ಹಾರಿಜಾನ್ ಬುಕ್ಸ್ : 1992 : ಅಧ್ಯಾಯ 1
3. ಉಮಾಚಕ್ರವರ್ತಿ ಮತ್ತು ನಂದಿತಾ ಹಕ್ಸರ್ : ದಿ ಡೆಲ್ಲಿ ರಯಟ್ಸ್ : ತ್ರಿ ಡೇಸ್ ಇನ್ ದಿ ಲೈಫ್ ಆಫ್ ಎ ನೇಷನ್; ದೆಹಲಿ: ಲ್ಯಾನ್ಸರ್ : 1987
4. ಪಿಯುಸಿಎಲ್ ಮತ್ತು ಪಿಯುಡಿಆರ್ : ಹು ಆರ್ ದ ಗಿಲ್ಟಿ : ಎ ರಿಪೋರ್ಟ್ ಟು ದಿ ನೇಷನ್ : ದೆಹಲಿ : ನವೆಂಬರ್, 1984
5. ಪಿಯುಡಿಆರ್ : ದಿ ಬಾಗಲ್ಪುರ ರಯಟ್ಸ್ : ದೆಹಲಿ : 1990 : ತನಿಖೆಯ ಅವಧಿಯಲ್ಲಿ ತೆಗೆದುಕೊಂಡ ವೈಯಕ್ತಿಕ ವರದಿಗಳು : ಡಿಸೆಂಬರ್-ಜನವರಿ; 1989-90. ಅಂಡರ್‌ಸ್ಟ್ಯಾಂಡಿಂಗ್ ದಿ ಕನ್‌ಜಕ್ಚರ್ ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, 27 : 18, ಮೇ 2 : 1992
7. ಕಮ್ಯೂನಲಿಸಂ ಕಂಬ್ಯಾಟ್, ಏಪ್ರಿಲ್ 2000 : ಪುಟ 29.
8. ಕುಂಕುಮ್ ಸಂಗಾರಿ : ಪಾಲಿಟಿಕ್ ಆಫ್ ದಿ ಪಾಸಿಬಲ್, ದೆಹಲಿ ತುಲಿಕಾ : 1999; ಪುಟ 489
9. ಹಿಂದೂ, ಸೆಪ್ಟೆಂಬರ್ 30, 1998
10. ರಿಪೋರ್ಟ್ ಆಫ್ ಸಿಕ್ಸ್ ವಿಮೆನ್ಸ್ ಆರ್ಗನೈಸೇಷನ್ಸ್; ಮೆನ್‌ಸ್ಪೀಕ್ : ದೆಹಲಿ : ಪ್ರೊಗ್ರೆಸಿವ್ ಪ್ರಿಂಟರ್ಸ್; 2000 ಪುಟ 75
11. ತನಿಕಾ ಸರ್ಕಾರ್ 'ಸಹೇಲಿ'ಯಲ್ಲಿ ಮಂಡಿಸಿದ ಪ್ರಬಂಧ : ಆಗಸ್ಟ್ 1998
12. ಕುಂಕುಮ ಸಂಗಾರಿ : 'ಕನ್ಸೆಂಟ್, ಏಜನ್ಸಿ ಅಂಡ್ ದಿ ರೆಟೊರಿಕ್ಸ್ ಆಫ್ ಇನ್‌ಸೈಟ್‌ಮೆಂಟ್' : ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ : 28-18, ಮೇ 1 : 1993

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಳಿ

ಮಗನನ್ನು ಹುಡುಕಿಕೊಡಿ ಇಲ್ಲ ಮಗನ ಹೆಣವನ್ನಾದರೂ ಕೊಡಿ

ಶ್ರೀಮತಿ ಉಮಾ ಚಕ್ರವರ್ತಿಯವರು ದೆಹಲಿ ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದಾರೆ. ಅನೇಕ ವರ್ಷಗಳಿಂದ ಮಹಿಳಾ ಚಳುವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವ ಉಮಾ ಅವರು ಮಾನವ ಹಕ್ಕುಗಳ ಹೋರಾಟ, ಕಾರ್ಮಿಕರ ಹೋರಾಟಗಳಲ್ಲೂ ನಿರಂತರವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಸಮಾನ ನಾಗರೀಕ ಸಂಹಿತೆ ಕುರಿತು ವ್ಯಾಪಕವಾಗಿ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಪರ್ಯಾಯವಾಗಿ ಐಚ್ಛಿಕ ನಾಗರೀಕ ಸಂಹಿತೆ (Optional Civil Code) ಯ ಕರಡನ್ನು ತಯಾರಿಸಲು ಶ್ರಮಿಸಿದ್ದಾರೆ. ದೆಹಲಿಯ P. U. D.R (Peopels Union for Democratic Rights)ನ ಸಕ್ರಿಯ ಸದಸ್ಯರಾಗಿರುವ ಉಮಾರವರು, ಸಂಘಟನೆಯ ಸತ್ಯಶೋಧ ಸಮಿತಿಯ ಭಾಗವಾಗಿ ಇತ್ತೀಚೆಗೆ ಕಾಶ್ಮೀರಕ್ಕೆ ಹೋಗಿದ್ದರು. ಅವರು ಬೆಂಗಳೂರಿಗೆ ಬಂದಿದ್ದಾಗ A. D.F (Peoples Democratic Forum) ನವರು ದಿನಾಂಕ 17-7-2001 ರಂದು ಅವರೊಂದಿಗೆ ಒಂದು ಸಭೆಯನ್ನು ಏರ್ಪಡಿಸಿದ್ದರು. ಉಮಾರವರು ಆ ಸಭೆಯಲ್ಲಿ ಕಾಶ್ಮೀರದ ಸದ್ಯದ ಸ್ಥಿತಿಗತಿಗಳನ್ನು ಕುರಿತಂತೆ ತಮ್ಮ ಅನುಭವವನ್ನು ಹಂಚಿಕೊಂಡರು. ಆ ಸಭೆಯ ವರದಿಯನ್ನು ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ.

ಮುಸ್ರಫ್ ಮತ್ತು ವಾಜಪೇಯಿಯವರ ಆಗ್ರಾ ಶೃಂಗ ಸಭೆ ಕುರಿತು ಮಾಧ್ಯಮ ಕೂಗೆಬ್ಬಿಸಿವೆ. ಇಬ್ಬರು ನಾಯಕರುಗಳ ಭೇಟಿಗೆ ನಡೆಯುತ್ತಿರುವ ವೈಭವದ ತಯಾರಿಗಳು, ಮಾತುಕತೆಯ ಫಲಿತಾಂಶ ಇತ್ಯಾದಿ ಕುರಿತು ವರದಿಗಳಾಗುತ್ತಿವೆ. ಆದರೆ ಯಾರೂ ಕಾಶ್ಮೀರಿ ಜನರ ಬಗ್ಗೆ, ಅಲ್ಲಿನ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಉಸಿರೆತ್ತಿಲ್ಲ.

ಕಾಶ್ಮೀರದ ಸದ್ಯದ ಪರಿಸ್ಥಿತಿಯನ್ನು ಕುರಿತು ಮಾತನಾಡುವಾಗ ಅದರ ಇತಿಹಾಸದ ಹಿನ್ನೆಲೆಯನ್ನು ಗುರುತಿಸುವುದು ಮುಖ್ಯವಾಗುತ್ತದೆ. ಬ್ರಿಟಿಷರು ಮಹಾರಾಜ ರಂಜಿತ್‌ಸಿಂಗನನ್ನು ಸೋಲಿಸಿ, ಅವನಿಂದ ಜಮ್ಮು, ಕಾಶ್ಮೀರ, ಲಡಾಕ್‌ನ್ನು ವಶಪಡಿಸಿಕೊಂಡು ಸ್ಥಳೀಯ ಡೋಗ್ರಾ ರಾಜವಂಶದ ಗುಲಾಬ್‌ಸಿಂಗ್‌ಗೆ 1846 ರಲ್ಲಿ ಮಾರಾಟ ಮಾಡಿತು. ಈ ಡೋಗ್ರಾರಾಜರ ಆಳ್ವಿಕೆಯು ಜನಪರವಾಗಿರಲ್ಲಿಲ್ಲ ಎಂಬುದಕ್ಕೆ, ಸಾಕಷ್ಟು ನಿದರ್ಶನಗಳಿವೆ. ಡೋಗ್ರಾ ಆಳ್ವಿಕೆ ವಿರುದ್ಧ ನಡೆದಿರುವ ಹೋರಾಟಗಳನ್ನು ಗಮನಿಸಿದರೆ ಆಳ್ವಿಕೆ ಜನ ವಿರೋಧಿಯಾಗಿತ್ತೆಂದು ತಿಳಿಯುತ್ತದೆ. ಉದಾಹರಣೆಗೆ ಅಲ್ಲಿನ ರೇಷ್ಮೆ ಕಾರ್ಖಾನೆ ಕಾರ್ಮಿಕರ ಮುಷ್ಕರ.

ಬ್ರಿಟಿಷರು ದೇಶ ಬಿಡುವ ಸಂದರ್ಭದಲ್ಲಿ ಕಾಶ್ಮೀರವನ್ನು ಕುರಿತು ನಿರ್ಧಾರವನ್ನು ರಾಜನಿಗೆ ಬಿಟ್ಟುಕೊಟ್ಟರು. ಆಗಿನ ರಾಜ ಹರಿಸಿಂಗನನ್ನು ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಬಗ್ಗೆ ಹೆಚ್ಚು ಆಸಕ್ತನಾಗಿದ್ದನು. ಸ್ವಾಯತ್ತತೆ ಉಳಿಸಿಕೊಂಡರೆ ಉಪಯೋಗವೋ ಭಾರತ ಸರ್ಕಾರಕ್ಕೆ ಸೇರಿಕೊಂಡರೆ ಉಪಯೋಗವೋ ಎಂಬ ದ್ವಂದ್ವದಲ್ಲಿದ್ದ. ಪಾಕಿಸ್ತಾನದ ಆಕ್ರಮಣದ ಸಂದರ್ಭದಲ್ಲಿ ಭಾರತ ಸರ್ಕಾರ ಶರತ್ತಿನ ಮೇಲೆ ಸಹಾಯ ಮಾಡುವುದಾಗಿ ಹೇಳಿತು. ಆ ಸಂದರ್ಭದಲ್ಲಿ ಭಾರತ ಸರ್ಕಾರದ ಆಳ್ವಿಕೆಗೆ ಒಳಪಡುವ ಒಡಂಬಡಿಕೆಗೆ ಸಹಿ ಹಾಕಿದನು. ರಾಜನಿಂದ ಕಾಶ್ಮೀರದ ಜನರ ಆಶಯಕ್ಕೆ ಭಂಗವಾಯಿತು. ಮುಂದೆ ಭಾರತ ಸರ್ಕಾರವೂ ಅವರ ಆಶಯಕ್ಕೆ ಕಿವಿಗೊಡಲಿಲ್ಲ.

ಮುಸ್ಲಿಮ್‌ರು, ಸಿಖ್ಖರು, ಹಿಂದೂಗಳ ನಡುವೆ ಸಾಮರಸ್ಯವುಳ್ಳ ಸೆಕ್ಯೂಲರ್ ವಾತಾವರಣ ಅಲ್ಲಿತ್ತು. 1930 - 40 ರ ಅವಧಿಯಲ್ಲಿ ಸಮುದಾಯವಾದದಿಂದ ಪ್ರಭಾವಿತರಾಗಿದ್ದ ಷೇಕ್ ಅಬ್ದುಲ್ಲಾರ ನಾಯಕತ್ವವುಳ್ಳ ನ್ಯಾಶನಲ್ ಕಾನ್‌ಫೆರೆನ್ಸ್ ಪಕ್ಷರೂಪುಗೊಂಡಿತ್ತು. 1944 ರಲ್ಲಿ ಕಾಶ್ಮೀರದ ಜನರು ರಾಜಾಳ್ವಿಕೆಯನ್ನು ವಿರೋಧಿಸಿ ಸಂವಿಧಾನ, ಸಾರ್ವಭೌಮತ್ವ ಕುರಿತು ಮಾತನಾಡುತ್ತಿದ್ದರು. ಹೊಸ ಕಾಶ್ಮೀರದ ಸಂವಿಧಾನದ ಕರಡು ತಯಾರಿಕೆಯಲ್ಲಿದ್ದರು. ಕರಡುನಲ್ಲಿ ಶಿಕ್ಷಣ, ಉಚಿತ ವೈದ್ಯಕೀಯ ಸೌಲಭ್ಯವನ್ನು ಸೂಚಿಸಲಾಗಿತ್ತು. 1946 - 47ರಲ್ಲಿ ಕಾಶ್ಮೀರ ಬಿಟ್ಟು ತೊಲಗಿ ಚಳುವಳಿ ವ್ಯಾಪಕವಾಗಿತ್ತು. ಬ್ರಿಟಿಷರನ್ನಷ್ಟೇ ಅಲ್ಲ ರಾಜನನ್ನೂ ಸಹ ಕಾಶ್ಮೀರ ಬಿಡಬೇಕೆಂದು ಹೋರಾಟ ನಡೆಸಲಾಗಿತ್ತು.

ಪ್ರಜಾತಂತ್ರವು ಕಾಶ್ಮೀರದಲ್ಲಿ ನೆಲೆಗೊಳ್ಳಲೇ ಇಲ್ಲ, ಮಿಲಿಟರಿಯೇ ಹೆಚ್ಚು ಪ್ರಾಬಲ್ಯ ಹೊಂದಿತ್ತು. ಮಾನವ ಹಕ್ಕುಗಳ ಉಲ್ಲಂಘನೆಯು ನಿರಂತರವಾಗಿ ನಡೆಯುತ್ತಲೆ ಬಂದಿದೆ. ನಮ್ಮಂತಹವರು ಕಾಶ್ಮೀರವನ್ನು ಕಂಡಿರುವುದು ಹಳೇ ಹಿಂದಿ ಸಿನಿಮಾದಲ್ಲಿ ತೋರಿಸಿರುವುದನ್ನು ಅಥವಾ ಟೂರಿಸ್ಟ್‌ಗಳಾಗಿ ಅಲ್ಲಿಗೆ ಹೋಗಿ ದೋಣಿ ಮನೆಗಳಲ್ಲಿ ಅಥವಾ ಕಾಶ್ಮೀರದ ಸಾಂಪ್ರದಾಯಿಕ ಉಡುಗೆ ತೊಟ್ಟು ಫೋಟೊ ತೆಗೆಸಿಕೊಳ್ಳುವುದಕ್ಕಷ್ಟೆ

ಸೀಮಿತವಾಗಿದೆ. ನಿಜವಾದ ಕಾಶ್ಮೀರ ಅಲ್ಲಿನ ಜನರ ಆಶಯ ಹೆಚ್ಚಿನ ಜನರಿಗೆ ತಿಳಿದಿಲ್ಲ. ನಾನು ಕಾಶ್ಮೀರಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿನ ವಿಮಾನ ನಿಲ್ದಾಣದಲ್ಲಿ ಸೆಕ್ಯೂರಿಟಿ ಚೆಕ್ ಮಾಡಲಾಯಿತು. ನನ್ನ ಕೈನಲ್ಲಿ ಕುಡಿಯುವ ನೀರಿನ ಬಾಟಲಿ ಇತ್ತು. ಎಲ್ಲಾ ವಸ್ತುಗಳನ್ನು ಚೆಕ್ ಮಾಡಿ ಸೀಲು ಮಾಡುತ್ತಿದ್ದರು. ನೀರಿನ ಬಾಟಲಿ ನೋಡಿ ನನಗೆ ನೀರನ್ನು ಕುಡಿಯಲು ಹೇಳಿದರು. ಚೆಕ್ ಮಾಡಿ ಸೀಲು ಮಾಡುವುದರಿಂದ ವಿಮಾನದಲ್ಲಿ ನೀರು ಕುಡಿಯಲಾಗುವುದಿಲ್ಲ. ಅದಕ್ಕೆ ನೀರು ಕುಡಿಯುವ ಹಾಗಿದ್ದರೆ ಈಗಲೆ ಕುಡಿದು ಬಿಡಬೇಕೆನ್ನುವ ಸಲುವಾಗಿ ಹೇಳುತ್ತಿದ್ದಾರೆ ಎಂದು ಕೊಂಚ ನೀರು ಕುಡಿದೆ. ಆದರೆ ಅವರು ನೀರು ಕುಡಿಯಲು ಹೇಳಿದ್ದು ಬಾಟಲಿಯಲ್ಲಿ ಆಸಿಡ್ ಅಥವಾ ಇನ್ಯಾವುದೊ ಮಾರಕ ರಸಾಯನಿಕವಿರಬೇಕೆಂದು ಪರೀಕ್ಷಿಸುವ ಸಲುವಾಗಿ ಎಂದು ನಂತರ ತಿಳಿಯಿತು. ಅಲ್ಲಿನ ಭದ್ರತಾ ವ್ಯವಸ್ಥೆ ಕುರಿತು ಹೇಳಲು ಇದೊಂದು ಸಣ್ಣ ನಿದರ್ಶನವಷ್ಟೇ.

ಪ್ರತಿ ಹತ್ತು ಅಡಿಗೊಬ್ಬ ಭದ್ರತಾ ಸಿಬ್ಬಂದಿ ಬಂದೂಕಿನೊಂದಿಗೆ ಇರುತ್ತಾನೆ. ಇಂತಹ ಭೀತಿಯ ವಾತಾವರಣದಲ್ಲೂ ಜನ ನಿಜವಾಗಿ ಬಯಸುತ್ತಿರುವುದು ಮಾಮೂಲಿ ಸ್ಥಿತಿಯನ್ನು, ಮಾನವ ಹಕ್ಕುಗಳ ಸಂಘಟನೆಯವರ ಬಗ್ಗೆ ಅಲ್ಲಿನ ಜನರಿಗೆ ತುಂಬಾ ವಿಶ್ವಾಸವಿದೆ. ಅಲ್ಲಿ ಪ್ರತಿಯೊಬ್ಬರಿಗೂ, ಸಣ್ಣ ಮಕ್ಕಳಿಗೂ ಸಹ ಮಾನವಹಕ್ಕು, ಕಸ್ಟಡಿ ಸಾವು ಎಂಬ ಪದಗಳು ಪರಿಚಿತ. ನಾವು ಹೋದಾಗ ಅಲ್ಲಿನ ಜನರು ಹೋ ನೀವು ಹ್ಯೂಮನ್ ರೈಟ್ಸ್, ಹ್ಯೂಮನ್ ರೈಟ್ಸ್ ಎಂದು ಖಾತ್ರಿಪಡಿಸಿಕೊಳ್ಳುತ್ತಿದ್ದರು. ನಮಗೆ ಅವರ ಆತ್ಮೀಯತೆ ಕಂಡು ಸಂತೋಷವಾಯಿತು.

ಮುಸ್ಲಿಂ ಮಹಿಳೆಯರು ಹೆಚ್ಚು ಶೋಷಿತರು, ಬುರ್ಕಾದೊಳಗಿರುವವರು, ಶಿಕ್ಷಣವಿರುವುದಿಲ್ಲ ಎಂಬ ಸಾಮಾನ್ಯ ಭಾವನೆ ಅಲ್ಲಿನ ಮಹಿಳೆಯರನ್ನು ನೋಡಿದಾಗ ಮುರಿದು ಬಿತ್ತು. ಅಲ್ಲಿ ಸ್ಕೂಲು ಕಾಲೇಜುಗಳು ಹೆಣ್ಣು ಮಕ್ಕಳಿಂದ ತುಂಬಿವೆ. ತೀರಾ ಹಿಂದುಳಿದ ಪ್ರದೇಶವೆಂದು ಕರೆಸಿಕೊಳ್ಳುವ ಪುಟ್ಟ ಹಳ್ಳಿಯೊಂದರಲ್ಲಿ ಶಾಲೆಯೊಂದನ್ನು ಅತ್ಯಂತ ವ್ಯವಸ್ಥಿತವಾಗಿ ಮೊಹಲ್ಲಾದವರು ನಡೆಸುತ್ತಿರುವುದನ್ನು ನಾವು ಕಂಡೆವು. ಆ ಮಹಿಳೆಯರು ನಿತ್ಯದ ಮಾರಣಹೋಮವನ್ನು ನೋಡುತ್ತಲೇ ತಮ್ಮ ಧೈರ್ಯ, ಉತ್ಸಾಹವನ್ನು ಬಿಟ್ಟುಕೊಡದೆ ಜೀವಂತ ವಾಗಿದ್ದಾರೆ. ಭದ್ರತಾ ಸಿಬ್ಬಂದಿಗಳು ತಪಾಸಣೆಗೆಂದು ಬಂದರೆ ತಪಾಸಣೆ ಮುಗಿಯುವವರೆಗೂ ಮಹಿಳೆಯರನ್ನು 8 - 9 ಗಂಟೆಗಳ ಕಾಲ ಮನೆಯಿಂದ ಹೊರಗೆ ಬಯಲಿನಲ್ಲಿ ಕೂರಿಸುತ್ತಾರೆ. ಯಾರೂ ಅಲ್ಲಾಡುವಂತಿಲ್ಲ, ಥಂಡಿ ಚಳಿಯಲ್ಲಿ ಕುಳಿತುಕೊಳ್ಳಬೇಕು. ಶೌಚಕ್ಕೂ ಏಳುವಂತಿಲ್ಲ. ಅತ್ಯಾಚಾರದ ಪ್ರಕರಣಗಳು ಅಧಿಕ. ಆ ಬಗ್ಗೆ ನಿಖರವಾದ ಅಂಕಿ ಅಂಶಗಳಿಲ್ಲ. ಅತ್ಯಾಚಾರವನ್ನು ಮರ್ಯಾದೆಯ ಪ್ರಶ್ನೆ ಎಂದು ಪರಿಗಣಿಸುವುದರಿಂದ ಎಷ್ಟೋ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ.

> **ಮಹಿಳೆಯರದು ಕಷ್ಟದ ಪರಿಸ್ಥಿತಿ. ಸರ್ಕಾರದ ದಬ್ಬಾಳಿಕೆ ಜೊತೆಗೆ ಸಮಾಜದ ದಬ್ಬಾಳಿಕೆಯನ್ನು ಅವರು ಎದುರಿಸಬೇಕು. ಅಲ್ಲಿನ ಉಗ್ರವಾದಿಗಳು ಮಹಿಳೆಯರು ಬುರ್ಖಾವನ್ನು ಕಡ್ಡಾಯವಾಗಿ ಧರಿಸಬೇಕೆಂದು ಒತ್ತಡ ತಂದಾಗ ಮಹಿಳೆಯರನ್ನು ಬಸ್ಸಿನಲ್ಲಿ ಹೋಗದೇ ನಡೆದೇ ಹೋದರೂ ಸರಿಯೇ ಬುರ್ಖಾ ತೊಡದೆ ನಡೆದು ಹೋಗಲು ತೊಡಗಿದರಂತೆ. ಒತ್ತಡಕ್ಕೆ ಮಣಿಯದ ಕಾರಣ ಕಡ್ಡಾಯ ಬುರ್ಖಾ ಯಶಸ್ವಿಯಾಗಲಿಲ್ಲ. ಶೇ 2 ಮಹಿಳೆಯರಷ್ಟೆ ಅಲ್ಲಿ ಬುರ್ಖಾ ತೊಡುವುದು.**

ಅಲ್ಲಿನ ಹುಡುಗಿಯೊಬ್ಬಳನ್ನು ನೀನೇನಾಗಬೇಕೆಂದಿರುವೆ ಎಂದು ಕೇಳಿದಾಗ ಡಾಕ್ಟರ್ ಆಗಬೇಕೆಂದಿರುವೆ ಎಂದಳು. ಇಂತಹ ವಾತಾವರಣದಲ್ಲಿ ಅದು ಸಾಧ್ಯವೇ ಎಂದಾಗ ಆಕೆ "ನೀವು ಅಂತಹ ವಾತಾವರಣವನ್ನು ಕಲ್ಪಿಸಿದಾಗ ನಾನು ಡಾಕ್ಟರ್ ಆಗುವೆ" ಎಂದಳು. ಮಾಮೂಲಿನ ವಾತಾವರಣವನ್ನು ಆ ಜನ ತೀವ್ರವಾಗಿ ಬಯಸುತ್ತಾರೆ. ನಿತ್ಯದ ಹಿಂಸಾಕಾಂಡದಿಂದ ಅವರು ಬೇಸತ್ತಿದ್ದಾರೆ. ಅಲ್ಲಿನ ಒಂದು ಶಾಲೆಯ ಆವರಣವನ್ನು ಆಸ್ಫೋಟಕದಿಂದ ಸಿಡಿಸಲಾಗಿತ್ತು. ಹುಡುಗಿಯರು ಗಾಯಗೊಂಡರು. ಅಲ್ಲೆ ಪಕ್ಕದ ಕಟ್ಟಡದಲ್ಲಿದ್ದ ನಾವು ಅದನ್ನು ಕಂಡು ಭೀತರಾದೆವು. ಆದರೆ ಕೆಲವೇ ಗಂಟೆಗಳಲ್ಲಿ ಎಲ್ಲವನ್ನು ಸರಿಪಡಿಸಿಕೊಂಡು ಏನು ಆಗಿಲ್ಲವೆಂತೆ ಕ್ಲಾಸುಗಳನ್ನೂ ಮುಂದುವರೆಸಲಾಯಿತು.

ಹಮಿದಾ ಎಂಬ 17 ವರ್ಷ ಹುಡುಗಿಯ ಪರಿಚಯವಾಯಿತು. ಆಕೆಯು ಮೊದಲಿಗೆ ನನ್ನನ್ನು ಕರೆದು ಮಾತನಾಡಿಸಿದಳು. ನಾನು ಮಮೂಲಿನಂತೆ ಹೆಸರೇನು, ಏನು ಓದುತ್ತಿದ್ದೀಯಾ? ಏನಾಗಬೇಕೆಂದಿರುವೆ? ಎಂದು ವಿಚಾರಿಸಿದರೆ ಆಕೆ ನಾನು ಲಾಯರ್ ಆಗಬೇಕೆಂದಿರುವೆ, ತನ್ನ ಸಮಾಜದಲ್ಲಿನ ಶೋಷಣೆಯನ್ನು, ಸರ್ಕಾರದ ದಬ್ಬಾಳಿಕೆಯನ್ನು ಎದುರಿಸಲು ಲಾಯರ್ ಆಗಬೇಕೆಂದಿರುವೆ ಎಂದಳು. ಮೊದಲು ನಮ್ಮೊಳಗಿರುವ ಶೋಷಣೆ ಎದುರಿಸಬೇಕು, ಯಾಕೆಂದರೆ ಸಣ್ಣ ಸಣ್ಣ ಅನ್ಯಾಯಗಳ ವಿರುದ್ಧ ಹೋರಾಡುವಾಗ ದೊಡ್ಡ ದೊಡ್ಡ ಅನ್ಯಾಯಗಳು ತಾನೆ ತಾನಾಗಿ ಬಿದ್ದು ಹೋಗುತ್ತವೆ. (ಚೋಟೆ ಜೊಲ್ಮೊಸೆ ಲಡೋ ಬಡೇ ಜುಲ್ಮ್ ಕಟತೆ ಹೈ)ಕಸ್ಟಡಿ ಸಾವು, ವಿಚಾರಣೆಗೆಂದು ಕರೆದೊಯ್ದವರು ಕಾಣೆಯಾಗುವುದು ಅಲ್ಲಿ ಮಾಮೂಲಿ ವಿಷಯವಾಗಿದೆ, ಪರ್ವಿನಾ ಹಂಗ ಎಂಬ ಮಹಿಳೆ ಕಳೆದ 11

ವರ್ಷಗಳಿಂದ್ಲ ಕಾಣೆಯಾದ ತನ್ನ ಮಗನಿಗಾಗಿ ಹುಡುಕಾಡುತ್ತಿದ್ದಾಳೆ ಮಿರತ್, ದೆಹಲಿ ಜೈಲು ಸೇರಿದಂತೆ ಅನೇಕ ಜೈಲುಗಳನ್ನು ಮಗನ ಸಲುವಾಗಿ ಸುತ್ತಾಡಿದ್ದಾಳೆ. ತನ್ನ ಮಗನನ್ನು ಕರೆದುಕೊಂಡು ಹೋದ ವ್ಯಕ್ತಿಯನ್ನು ಆಕೆ ನೋಡಿದ್ದಾಳೆ. ಆದರೂ ಆಕೆಯ ಮಗನ ಬಗ್ಗೆ ಯಾರೂ ಸುಳಿವು ನೀಡುತ್ತಿಲ್ಲ. ಬದಲಿಗೆ 1ಲಕ್ಷ ರೂ ಗಳನ್ನು ಪರಿಹಾರಧನವಾಗಿ ನೀಡುತ್ತೇವೆಂದು ಹೇಳಿದ್ದಕ್ಕೆ ಆಕೆ ಹಣ ತೆಗೆದು ಕೊಂಡು ನಾನೇನೂ ಮಾಡಲಿ ನನ್ನ ಮಗನನ್ನು ಹಿಂತಿರುಗಿಸಿ ಇಲ್ಲ, ಅವನ ಹೆಣವನ್ನಾದರೂ ಕೊಡಿ ಎಂದು ಆಕೆ ಪಟ್ಟು ಹಿಡಿದಿದ್ದಾಳೆ. ಆಕೆ ಅನಕ್ಷರಸ್ಥಳು. ಆಕೆ ಪೇಪರಿನಲ್ಲಿ ಬರುವ ಕಾಣೆಯಾದವರ ಪ್ರತಿಯೊಂದು ಭಾವಚಿತ್ರವನ್ನು ಕತ್ತರಿಸಿಟ್ಟು ಕೊಂಡು ಫೈಲ್ ಮಾಡಿದ್ದಾಳೆ. ಕಾಣೆಯಾದವರ ಮನೆಯವರ ಸಂಘಕ್ಕೆ ಅಧ್ಯಕ್ಷೆಯಾಗಿ ಆಕೆ ಕೆಲಸ ಮಾಡುತ್ತಿದ್ದಾಳೆ. ಕಾಣೆಯಾದವರಿಗೆ ಸಂಬಂಧಪಟ್ಟಂತೆ ಪರಿಹಾರ ಧನ ನೀಡುವುದಷ್ಟೆ ತನ್ನ ಜವಾಬ್ದಾರಿ ಎಂಬಂತೆ ಸರ್ಕಾರ ವರ್ತಿಸುತ್ತಿದೆ. ಮಾಧ್ಯಮ ಗಳೂ ಸಹ ಕಸ್ಟಡಿ ಸಾವು, ಕಾಣೆಯಾದವರ ಕುರಿತಂತೆ ಕಣ್ಣು ಕಿವಿ ಮುಚ್ಚಿಕೊಂಡು ಕೂತಿವೆ.

ಮಾನವ ಹಕ್ಕುಗಳ ಸಂಘಟನೆಗಳಿಂದಾಗಿ ಕಾಶ್ಮೀರದ ವಿಷಯ ಹೆಚ್ಚು ಬೆಳಕಿಗೆ ಬರುತ್ತಿದೆ.

> ಚುನಾವಣೆಯಾಗಲಿ, ಕದನ ವಿರಾಮವಾಗಲಿ ಬರಿ ಸೋಗಾಗಿವೆ. ಪ್ರತಿ ಚುನಾವಣೆಯಲ್ಲೂ ನ್ಯಾಶನಲ್ ಕಾನ್‌ಫರೆನ್ಸ್ ಪಕ್ಷವೇ ಆಯ್ಕೆಯಾಗುತ್ತಿದೆ. ಅಂದೊಂದು ಅತ್ಯಂತ ಭ್ರಷ್ಟಪಕ್ಷವಾಗಿದೆ. ಸೇನೆಯೂ ಸಹ ಭ್ರಷ್ಟವೆಂದು ಅಲ್ಲಿನ ಜನರ ನಂಬಿಕೆ. ಮರಗಳನ್ನು ಕದ್ದು ಮಾರುವುದು ಸಾಮಾನ್ಯ.

ಅಲ್ಲಿನ ಆಡಳಿತದಲ್ಲಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರ ಹೆಂಡತಿಯು ಸೇನೆಯವರಿಗೆ ಹಣ ನೀಡಿದರೆ ಗಡಿಯನ್ನು ದಾಟಬಹುದೆಂದು ಹೇಳಿದರು. ಹುರಿಯತ್ ಸಂಘಟನೆಯಲ್ಲೂ ಭಿನ್ನಾಭಿಪ್ರಾಯಗಳಿವೆ. ವಿಭಜನೆಗಳಿವೆ. ಹುರಿಯತ್ ಒಂದು ಗುಂಪಿಗೆ ಸೇರಿದ ಮೆಹಬೀಬ ಎಂಬ ಮಹಿಳೆ ಅನೇಕ ಕೆಲಸಗಳನ್ನು ಮಾಡುತ್ತಿದ್ದಾಳೆ. ಇಡಿ ಕಣಿವೆಯನ್ನು ಸುತ್ತಾಡುವ ಆಕೆ ತಲುಪಲು ದುಸ್ಸಾಧ್ಯವಾದ ಜಾಗಗಳಿಗೂ ನಡೆದೇ ಹೋಗಿ ಬಂದಿದ್ದಾಳೆ. ಹುರಿಯತ್ ಕಾಶ್ಮೀರ ಜನರ ನಿಜವಾದ ಪ್ರತಿನಿಧಿಯೇ ಎಂದು ಕೇಳಿದಾಗ, ಕೆಲವರು ಇಲ್ಲವೆನ್ನುತ್ತಾರೆ. ಕೆಲವರು ಸದ್ಯದ ಪರಿಸ್ಥಿತಿಯಲ್ಲಿ ಅದೊಂದು ಜನ ಪ್ರತಿನಿಧಿಯಾಗಿರುವುದೆನ್ನುತ್ತಾರೆ. ಈಗಿರುವ ಆಳುವ ಪಕ್ಷ ಮಾತ್ರ ಖಂಡಿತವಾಗಿಯೂ ಕಾಶ್ಮೀರದ ಜನರ ಪ್ರತಿನಿಧಿಯಲ್ಲವೆಂದು ಎಲ್ಲರೂ ಅಭಿಪ್ರಾಯ ಪಡುತ್ತಾರೆ. ಕಾಶ್ಮೀರಿ ಪಂಡಿತರು ಮೇಲ್ವರ್ಗಕ್ಕೆ ಸೇರಿದವರಾಗಿದ್ದು ಬಹಳಷ್ಟು ಜನ ದೆಹಲಿಗೆ ವಲಸೆ ಹೋಗಿದ್ದಾರೆ. ಬಡ ಪಂಡಿತರು ಜಮ್ಮುವಿಗೆ ಹೋಗಿ ನೆಲೆಸಿದ್ದಾರೆ. ಜಮ್ಮುವಿನ ಹೆಚ್ಚಿನ ಸೌಲಭ್ಯವುಳ್ಳವರಾಗಿದ್ದಾರೆ ನಾವು ಕಡೆಗಣಿಸಲ್ಪಟ್ಟಿದ್ದೇವೆ ಎಂದು ಮುಸ್ಲಿಮರು ಭಾವಿಸುತ್ತಾರೆ.

ಉಗ್ರವಾದದ ಕುರಿತು ಪ್ರಶ್ನಿಸಿದಾಗ ಸದ್ಯ ಪರಿಸ್ಥಿತಿಯಲ್ಲಿ ಸರ್ಕಾರ ದಬ್ಬಾಳಿಕೆಯನ್ನು ಎದುರಿಸಲು ಉಗ್ರರಿಂದಷ್ಟೇ ಸಾಧ್ಯವೆಂಬುಂದು ಅಲ್ಲಿನ ಬಹಳಷ್ಟು ಜನ ಅಭಿಪ್ರಾಯ ಪಡುತ್ತಾರೆ. ಆದರೆ, ಯಾರಿಗೂ ಕಾಶ್ಮೀರ ಕಟ್ಟು ಧರ್ಮಾಂಗದ ರಾಜ್ಯವಾಗುವುದು ಬೇಕಿಲ್ಲ. ಉಗ್ರರಲ್ಲೇ ಸ್ವಧರ್ಮ ಬಿಟ್ಟು ಭ್ರಷ್ಟರು ರಾಜ್ಯದ ಭದ್ರತಾ ವ್ಯವಸ್ಥೆಗಳಲ್ಲಿ ಸೇರಿಕೊಂಡು ಬಿಟ್ಟಿದ್ದಾರೆ. ಈಗಿರುವ ಉಗ್ರರು ಒಳ್ಳೆಯವರು ಎಂಬ ಅಭಿಪ್ರಾಯವೂ ಇವೆ. ಮಿಲಿಟರಿ ಮತ್ತು ಉಗ್ರರ ನಡುವೆ ಜನರು ಸಂಕಟ ಪಡುತ್ತಿದ್ದಾರೆ ಎಂಬುದು ಸಾಮಾನ್ಯ ಅಭಿಪ್ರಾಯ, ಹೆಚ್ಚಿನ ಜನರು ಅದರಲ್ಲೂ ಮಹಿಳೆಯರು ಕಾಶ್ಮೀರ ಪಾಕಿಸ್ತಾನಕ್ಕೆ ಹೋಗುವುದನ್ನು ವಿರೋಧಿಸುತ್ತಾರೆ. ಕಾಶ್ಮೀರದ ಜನರು ಅದರಲ್ಲೂ ಮಹಿಳೆಯರು ಕಾಶ್ಮೀರದ ಜನರಿಗೆ ಅವರ ಸ್ವಾಯತ್ತತೆ ಮುಖ್ಯವಾಗಿದೆ. ಪಾಕಿಸ್ತಾನಿ ಅಥವಾ ಭಾರತೀಯತೆಗಿಂತ ಅವರಿಗೆ ಕಾಶ್ಮೀರಿಯಂತೆ ಉಳಿಸಿಕೊಳ್ಳುವುದುಬೇಕಾಗಿದೆ. ನಮ್ಮದೇ ಸಾರ್ವಭೌಮತ್ವ ನಮಗೆ ಬೇಕು, ಅದು ಸಿಕ್ಕರೆ ಇಲ್ಲಿ ಬರುವ ಎಲ್ಲ ಜನರಿಗೂ ನಾವು ವೀಸಾ ನೀಡುತ್ತೇವೆ ಎನ್ನುತ್ತಾರೆ.

ಕಾಶ್ಮೀರದಲ್ಲಿರುವುದು ಸೂಫಿ ಸಂತರಿಂದ ಪ್ರಭಾವಿತವಾದ ಇಸ್ಲಾಂ ಧರ್ಮ. ಹೆಚ್ಚಿನ ಮುಸ್ಲಿಮರು ವ್ಯವಸಾಯ ಮಾಡುವವರು, ವಿವಿಧ ಕಸುಬಿನವರು. ಕಾಶ್ಮೀರದಲ್ಲಿ ಪ್ರಚಲಿತವಿರುವ ಕಥೆಯೊಂದಿದೆ. ಮುಂದೆ ಬಹುದೊಡ್ಡ ಸೂಫಿ ಸಂತನಾದವ ರೊಬ್ಬರು ಹುಟ್ಟಿದ ತಕ್ಷಣ ತಾಯಿಯ ಹಾಲನ್ನೆ ಕುಡಿಯಲಿಲ್ಲ ವಂತೆ. ಲಲ್ಲೇಶ್ವರಿಯೆಂಬ ಹಿಂದೂ ಸಂತಳೊಬ್ಬಳು ಬಂದು ಮಗುವನ್ನು ಎತ್ತಿಕೊಂಡು ಹರಸಿದ ಬಳಿಕ ಮಗು ಹಾಲು ಕುಡಿಯಿತಂತೆ. ಹಿಂದೂ ಸಂತಳಿಂದ ಆಧ್ಯಾತ್ಮದ ಹಾಲನ್ನು ಕುಡಿದ ಮೇಲೆ ಮಗು ತಾಯಿಯ ಹಾಲನ್ನು ಕುಡಿಯಿತು. ಎಂಬುದು ಅಲ್ಲಿನ ಜನರ ನಂಬಿಕೆ. ಇಂತಹ ಸಾಮರಸ್ಯವಿದ್ದ ಸುಂದರ ಕಣಿವೆ ರಕ್ತಪಾತವಾಗಿದೆ. ಮಾನವ ಹಕ್ಕುಗಳ ಸಂಘಟನೆಗಳು ಈಗಿನ ಪರಿಸ್ಥಿತಿ ಬದಲಾಯಿಸಲು ದುಡಿಯಬೇಕಾಗಿದೆ. ಕಾಶ್ಮೀರದ ಜನರ ಆಶಯವನ್ನು ಕಡೆಗಣಿಸಿರುವ ಎರಡು ಸರ್ಕಾರಗಳ ಸಂವಾದಕ್ಕಿಂತ ಅಲ್ಲಿನ ಜನರೊಂದಿಗೆ ಸಂವಾದ ಏರ್ಪಾಡಾಗಬೇಕು.

ಸರಸ್ವತಿ ದು.

ಇನ್ನೊಂದು ಪಾಕಿಸ್ತಾನದ ನೋಟಗಳು

ಮೂಲ : ಕಮಾಸ್

ಅನು : ವೆಂ. ವನಜ

ಆಗ ನಾನು ಚಿಕ್ಕವನಿದ್ದೆ, ನಾನು ಶೌಚಾಲಯಕ್ಕೆ ಹೋಗ ಬೇಕಾದಾಗಲೆಲ್ಲಾ ನನ್ನ ಅಣ್ಣ, 'ಪಾಕಿಸ್ತಾನಕ್ಕೆ ಹೋಗುತ್ತೇನೆ' ಎನ್ನುತ್ತಾ ಹಲ್ಲುಗಿಂಜುತ್ತಿದ್ದ. ನಾನಾಗ ನಗುತ್ತಿದ್ದುದು ನೆನಪು. ಶೌಚಾಲಯ ಮುಖ್ಯವಾಸದ ಮನೆಯ ಹೊರಗಿರುತ್ತದೆ. ಇದು ಸರ್ದಾರ್ ಪಟೇಲರು ಪಾಕಿಸ್ತಾನವನ್ನು 'ರೋಗಗ್ರಸ್ಥ ಮೂಳೆ' ಎಂಬ ವಿವರಣೆಯನ್ನು ಯಾವುದೋ ಉದ್ದೇಶದಿಂದ ನೀಡಿದ್ದನ್ನು ಒಂದು ರೀತಿಯಲ್ಲಿ ಪ್ರತಿಧ್ವನಿಸುತ್ತದೆ. ಬೆಳೆದಂತೆಲ್ಲಾ 'ಪಾಕಿಸ್ತಾನ ಶತ್ರುವಿನ ಹಾಗೆ' ಎನ್ನುವ ಯೋಚನಾ ಕ್ರಮದ ಬಗ್ಗೆ ನನಗೆ ಅನುಮಾನ ಹುಟ್ಟತೊಡಗಿತು. ನನಗೆ ಬೇರೇನೂ ತಿಳಿದಿರಲಿಲ್ಲ. ವಿದ್ಯಾರ್ಥಿ ಗುಂಪೊಂದರ ಭಾಗವಾಗಿ ನಾನು ಇತ್ತೀಚೆಗೆ ಅಲ್ಲಿಗೆ ಭೇಟಿ ನೀಡಿದಾಗ ಅದು ಬೇರೆಯೇ ಅರ್ಥವನ್ನು ಪಡೆದುಕೊಂಡಿತು.

ನಾನು ನನ್ನ ತಂದೆತಾಯಿಗಳಿಗೆ (ಪಾಕಿಸ್ತಾನಕ್ಕೆ ಹೋಗುವ ಬಗ್ಗೆ) ಹೇಳಿದಾಗ ಅವರಿಗೆ ತಮಾಷೆಯೆನಿಸಿತು. ಜೊತೆಗೆ ಸ್ವಲ್ಪ ಚಿಂತಿತರಾದರು. ನನ್ನ ಸುರಕ್ಷಿತತೆಯಲ್ಲದೆ ನನ್ನ ತರಗತಿಗಳು ಕೂಡ ಅವರ ತಲೆಯೊಳಗಿದ್ದವು. "ತೇರೆ ಸಾಥ್ ಕೆ ಸಬ್ ಲೋಗ್ ಅಮೆರಿಕ ಔರ್ ಲಂಡನ್ ಜಾ ರಹೆ ಹೈಂ ತುಮ್ ಪಾಕಿಸ್ತಾನ್ ಕೆ ಲಿ ಯೆ ತೈಯಾರ್ ಹೊ" (ನಿನ್ನ ಜೊತೆಗಾರರೆಲ್ಲರೂ ಅಮೆರಿಕ ಮತ್ತು ಲಂಡನ್ನಿಗೆ ಹೋಗುತ್ತಿದ್ದಾರೆ. ನೀನು ಪಾಕಿಸ್ತಾನಕ್ಕೆ ಹೋಗಲು ಸಿದ್ಧನಾಗಿದ್ದೀಯ) ಎಂದು ನನ್ನ ತಾಯಿ ಹೇಳಿದರು.

ಈಗ ನಾನು ಹಿಂದಿರುಗಿ ಬಂದಿದ್ದೇನೆ. ಪಾಕಿಸ್ತಾನದಲ್ಲಿ ಭಾರತೀಯನಾಗಿ ನಾನು ಪಡೆದ ಅನುಭವಕ್ಕೆ ಅಮೆರಿಕ ಅಥವಾ ಲಂಡನ್ನಿನ ಯಾವ ಭೇಟಿಯನ್ನೂ ಹೋಲಿಸಲಾಗುತ್ತಿರಲಿಲ್ಲವೆಂದು ನನಗೀಗ ಮನವರಿಕೆಯಾಗಿದೆ.

ಪಾಕಿಸ್ತಾನಕ್ಕೆ ಭೇಟಿ ನೀಡಿದ ಕೆಲವು ಭಾರತೀಯ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬನಾಗಿದ್ದೇನೆ. ಅಲ್ಲಿನ ವೈವಿಧ್ಯಮಯ ಜನರೊಂದಿಗೆ ಬೆರೆಯುವ ಅವಕಾಶವನ್ನು ಪಡೆದಿದ್ದೆ. ಅದು ನನಗೆ ದೊರಕಿದ ಒಂದು ವಿಶೇಷ ಅವಕಾಶ ಎಂದು ಭಾವಿಸುತ್ತೇನೆ. ಪಾಕಿಸ್ತಾನೀಯರನೇಕರು ಭಾರತೀಯರ ಬಗೆಗೆ ಹೊಂದಿರುವ ಪ್ರೀತಿ ಮತ್ತು ಒಳ್ಳೆಯ ಭಾವನೆಗಳನ್ನು ಎಲ್ಲರಿಗೂ ತಿಳಿಸಲು ಆಯ್ಕೆಯಾಗಿರುವುದರ ಬಗೆಗೂ ಹಾಗೇ ಅನ್ನಿಸುತ್ತದೆ. ಭಾರತೀಯರು ಮತ್ತು ಪಾಕಿಸ್ತಾನೀಯರು ಪರಸ್ಪರರನ್ನು ಶತ್ರುಗಳೆಂದು ಭಾವಿಸುತ್ತಾರೆ ಎಂದು ಜನಜನಿತವಾಗಿರುವ ಅಭಿಪ್ರಾಯಕ್ಕೆ ಇದು ವಿರುದ್ಧವಾಗಿದೆ.

ಪಾಕಿಸ್ತಾನದಲ್ಲಿದ್ದ ಹನ್ನೊಂದು ದಿನಗಳಲ್ಲಿ ಪ್ರತಿಯೊಂದು ದಿನವೂ ಸಂತೋಷದ ದಿನವಾಗಿತ್ತು. ನಾವು ಲಾಹೋರಿನಿಂದ ಇಸ್ಲಾಮಬಾದ್, ಪೆಷಾವರ್ ಮತ್ತು ಅಲ್ಲಿಂದ ಲಾಹೋರಿಗೆ ಓಡಾಡಿದೆವು. ನಮ್ಮ ಪ್ರಯಾಣದ ಅವಧಿಯಲ್ಲಿ ನಡೆದ ಹಲವು ಘಟನೆಗಳಿಂದ ಇದು ಸಾಬೀತಾಗುತ್ತದೆ. ಇವುಗಳನ್ನು ನಂಬಲು ಹಲವರಿಗೆ ಕಷ್ಟವೆನಿಸಬಹುದು. ಅವರೆಲ್ಲನೇಕರು ಶಾರೂಖ್‌ಖಾನ್ ಮತ್ತು ಸಚಿನ್ ತೆಂಡೂಲ್ಕರರ ಅಭಿಮಾನಿ ಗಳಾಗಿದ್ದರು. ನಾವು ಭಾರತೀಯರೆಂದು ನಿಶ್ಚಿತವಾದ ಮೇಲೆ ಅಪರಿಚಿತರನೇಕರು ಬೀದಿಗಳಲ್ಲಿ ಮಾತನಾಡಿಸಿದರು, ಮುಗುಳ್ನಕ್ಕರು ಮತ್ತು ಕೈಕುಲುಕಿದರು. ಪ್ರೌಢಶಾಲೆಯ ಇಬ್ಬರು ಹುಡಗರು ತಮ್ಮ ತರಗತಿಗಳಿಗೆ ಚಕ್ಕರ್ ಹೊಡೆದು ಮಿನಾರ್ ಎ ಪಾಕಿಸ್ತಾನದ ಬಳಿ ನಮ್ಮನ್ನು ಭೇಟಿ ಮಾಡಿದರು. ನಮ್ಮ ಟಿಕೇಟುಗಳನ್ನು ತಾವೇ ಕೊಳ್ಳುತ್ತೇವೆಂದರು. ಸುತ್ತಮುತ್ತಲ ಸ್ಥಳಗಳನ್ನು ನಮಗೆ ತೋರಿಸಿದರು. ಇಡೀ ಪ್ರವಾಸದ ಅವಧಿಯಲ್ಲಿ ನಮಗೆ ಯಾರಿಂದಲೂ ಒಮ್ಮೆಯೂ ದ್ವೇಷದ ಭಾವನೆಯ ಅನುಭವ ಆಗಲಿಲ್ಲ........................

ಈ ಐವತ್ತು ವರ್ಷಗಳಿಂದ ಗಟ್ಟಿಗೊಳ್ಳುತ್ತಿದ್ದ ಮಂಜು ಹೇಗೆ ಕರಗುವಂತೆ ಮಾಡಿಕೊಂಡೆವು ಎನ್ನುವುದು ಒಂದು ಸುದೀರ್ಘವಾದ, ರಸವತ್ತಾದ ಕಥೆ. ಇದರ ಪರಿಕಲ್ಪನೆಯ ಮಾಡಿದವರು ಮತ್ತು ಅದನ್ನು ಕಾರ್ಯಗತಗೊಳಿಸಿದವರು ಅನಿತಾ ಮತ್ತು ಉಷಾ ಇವರು 'ಸಂವಾದ'ದ ಸದಸ್ಯರು. ಸಮಾಜದಲ್ಲಿ ಒಂದು ಇತ್ಯಾತ್ಮಕವಾದ ಪಾತ್ರವನ್ನು ವಹಿಸುವುದು ಹೇಗೆಂದು ವಿದ್ಯಾರ್ಥಿಗಳು ಮತ್ತು ಯುವಜನರಿಗೆ ಮಾರ್ಗದರ್ಶನ ನೀಡುತ್ತಿರುವ ಬೆಂಗಳೂರು ಕೇಂದ್ರಸ್ಥಾನವಾಗಿರುವ ಸಂಸ್ಥೆಯೇ 'ಸಂವಾದ'. ನಮಗೆ 'ವೀಸಾ'ಗಳನ್ನು ಕೊಡಿಸಲು ಮತ್ತು ಸಭೆಗಳನ್ನು ಏರ್ಪಡಿಸಲು ಅವರು ಪಟ್ಟ ಶ್ರಮದ ಆಳ ಅಗಲಗಳನ್ನು ಅಳೆಯಲಾಗುವುದಿಲ್ಲ ಯಾವುದನ್ನು ಅಸಾಧ್ಯವೆಂದುಕೊಂಡಿದ್ದೆವೋ ಅದನ್ನು ಸಾಧ್ಯವಾಗಿಸಿದುದಕ್ಕಾಗಿ ನಾನು ಮತ್ತು ಪಾಕಿಸ್ತಾನದ ಅನೇಕರು ಅವರಿಗೆ ಕೃತಜ್ಞರಾಗಿರುವುದೊಂದನ್ನು ಬಿಟ್ಟು ಬೇರೇನೂ ಮಾಡಲಾಗುವುದಿಲ್ಲ. ಆದರೆ ಇನ್ನು ಮುಂದೆ ಈ ಕೆಲಸವನ್ನೇ

ಮಾಡಲು ಕಾತರರಾಗಿರುವ ಗುಂಪುಗಳಿಗೆ ಅದು ಸುಲಭವಾಗುತ್ತದೆನ್ನುವ ನಂಬಿಕೆಯಿದೆ.

ನನಗೆ ಪಾಕಿಸ್ತಾನದ ಹೆಚ್ಚಿನವು ನಿಗೂಢವಾಗಿದ್ದವು. ಜನಸಾಮಾನ್ಯರಿಗೆ ತಿಳಿದಿದ್ದುದಕ್ಕಿಂತ ಹೆಚ್ಚೇನೂ ನನಗೆ ತಿಳಿದಿರಲಿಲ್ಲ. ಇಲ್ಲಿಯ ಮುಖ್ಯವಾಹಿನಿ ಮಾಧ್ಯಮ ಮತ್ತು ಸಮಾಚಾರಗಳಿಗೆ ಮಾತ್ರ ನನ್ನನ್ನು ತೆರೆದುಕೊಂಡಿದ್ದ ನಾನು ಪಾಕಿಸ್ತಾನವನ್ನು ಮುಸ್ಲಿಮ್ ಮೂಲಭೂತವಾದಿಗಳ ಒಂದು ಕುದಿಯುತ್ತಿರುವ ಕಡಾಯಿ ಅಥವಾ ದೊಡ್ಡ ಹಂಡೆ, ಸದಾ ಅರಾಜಕತೆ ಮತ್ತು ದಿವಾಳಿತನಗಳ ಅಂಚಿನಲ್ಲಿರುವ ದೇಶ ಎಂದು ಭಾವಿಸಿದ್ದೆ. ಶಾಂತಿಯುತ ಮತ್ತು ಸಮೃದ್ಧವಾದ ಭಾರತವನ್ನು ಅಸ್ಥಿರಗೊಳಿಸುವ ಮಾರ್ಗಗಳನ್ನು ಹುಡುಕುವುದರಲ್ಲೇ ಸದಾ ತನ್ಮಯವಾಗಿರುವ ಐ ಎಸ್ ಐ (I-S I) ಪಾಕಿಸ್ತಾನದ ಕ್ರಿಕೆಟ್ ತಂಡ, ನಸ್ರತ್‌ಫತೇಹ ಆಲಿಖಾನ್, ಘುಲಾಮ್ ಅಲಿ ಅಥವಾ ಜುನೂನ್‌ಗಳನ್ನು ದೂರದರ್ಶನವು ಪರಿಚಯ ಮಾಡಿಸಿತ್ತಾದರೂ ಅದಕ್ಕಿಂತ ಹೆಚ್ಚಿನದೇನನ್ನೂ ಮಾಡಿರಲಿಲ್ಲ. ಸೇನಾ ದಂಗೆಯಾದ ಒಂದು ತಿಂಗಳ ನಂತರ ಅಲ್ಲಿಗೆ ಹೋಗಿದ್ದ ನಮ್ಮನ್ನು ನಗರದಲ್ಲಿ ಗುಟ್ಟಿನಲ್ಲಿ ಇಣಿಕಿ ನೋಡುತ್ತಾರೆ, ಹೆಜ್ಜೆ ಹೆಜ್ಜೆಗೂ ಯೋಧರು ನಮ್ಮನ್ನು ತಪಾಸಣೆಗೊಳಪಡಿಸುತ್ತಾರೆ ಎಂದು ಭಾವಿಸಿದ್ದೆ.

ಆದರೆ ನನಗೆ ಅನೇಕ ಅಚ್ಚರಿಗಳು ಕಾದಿದ್ದವು. ನಾವು ಸ್ಥಳೀಯ ಬಸ್ಸುಗಳಲ್ಲಿ ಪಯಣಿಸಿದೆವು. 'ಢಾಬಾ'ಗಳನ್ನು ಹೋಲುವ ರೆಸ್ಟೋರೆಂಟುಗಳಲ್ಲಿ ತಿಂದೆವು. ಅನಾರ್‌ಕಲಿ ಮತ್ತು ಖೈಬರ್ ಮಾರುಕಟ್ಟೆಗಳ ಜನಜಂಗುಳಿಯಿರುವ ರಸ್ತೆಗಳಲ್ಲಿ ನಡೆದಾಡಿದೆವು. ಚರ್‌ಸದ್ದಾ ಮತ್ತು ಸಕ್ಲೆನಾ ಹಳ್ಳಿಗಳಿಗೆ ಭೇಟಿ ನೀಡಿದೆವು. ದೈನಂದಿನ ಜನಜೀವನದ ಮೇಲೆ ಸೇನಾಡಳಿತವು ಯಾವುದೇ ಪರಿಣಾಮವನ್ನು ಬೀರಿದಂತೆ ಕಾಣಲಿಲ್ಲ. ವಾಸ್ತವದಲ್ಲಿ ಜನರಲ್ ಜಿಯಾ ಉಲ್ ಹಖ್‌ರ ಮರಣಾನಂತರ ಬೆನಜಿರ್ ಭುಟ್ಟೊರವರ ಆಯ್ಕೆಯೊಂದಿಗೆ ಪ್ರಜಾಪ್ರಭುತ್ವ ಮರಳಿದಾಗ ಜನರಿಗೆ ಎಷ್ಟು ಭರವಸೆ ಇತ್ತೋ ಅಷ್ಟೇ ಭರವಸೆಯಿಂದ ಈಗಲೂ ಅನೇಕರು ನಿರೀಕ್ಷಿಸುತ್ತಾರೆ. ಕೊಳೆಗೇರಿಯನ್ನು ಹೋಲುವಂಥ ಯಾವುದೇ ಪ್ರದೇಶವನ್ನೂ ನಾನಲ್ಲಿ ಕಾಣಲಿಲ್ಲ. ಇಸ್ಲಾಮಾಬಾದಿನಲ್ಲಿ ಹೈ ಕಮಿಷನರ್ ನಮಗೆ ನೀಡಿದ ಟೀ ಸಮಾರಂಭದಲ್ಲಿ ಭಾರತೀಯ ರಾಜತಾಂತ್ರಿಕರೊಬ್ಬರನ್ನು ಇದರ ಬಗ್ಗೆ ವಿಚಾರಿಸಿದೆ. ಬಡವರು ವಾಸಿಸುವ ಅನೇಕ ಪ್ರದೇಶಗಳು ಇತರರ ಗಮನಕ್ಕೆ ಬಾರದಂತೆ ಅವುಗಳಿಗೆ ಗೋಡೆಗಳನ್ನು ಕಟ್ಟಲಾಗಿದೆ. ತಾಂತ್ರಿಕವಾಗಿ ಹೇಳಬೇಕೆಂದರೆ, ಅಲ್ಲಿ ಅನೇಕ ಕೊಳೆಗೇರಿಗಳಿದ್ದ ಪಕ್ಷದಲ್ಲಿ ಪಾಕಿಸ್ತಾನ ಸರಕಾರ ಸಂದರ್ಭದ ನಿರ್ವಹಣೆಯನ್ನು ಬಹಳ ಚೆನ್ನಾಗಿಯೇ ಮಾಡಿದೆಯೆನ್ನಬಹುದು. ಆದರೆ ಬಡಜನರನ್ನು ಬಚ್ಚಿಡುವುದಕ್ಕಿಂತ ಅದರಿಂದ ಅವರನ್ನು ಮೇಲೆತ್ತುವುದನ್ನು ನಾನು ಇಷ್ಟಪಡುತ್ತೇನೆ. ಭಾರತದಲ್ಲಿ ಇಂಥ ಮೋಸ ಮಾಡಲು ಪ್ರಯತ್ನಿಸುವುದರ ಬದಲು ನೋಡುಗರನ್ನು ಕುರುಡರನ್ನಾಗಿಸುವುದು ಜಾಣತನ.

ಪಾಕಿಸ್ತಾನದ ಒಂದು ಮುಖ್ಯವಾದ ಮಗ್ಗಲು ಎಂದರೆ ಆಧುನಿಕವಾದ ಕಟ್ಟಡ ನಿರ್ಮಾಣಗಳು. ಇವುಗಳಲ್ಲನೇಕವು ರಾಜಧಾನಿಯಲ್ಲಿರುವುದನ್ನು ಕಂಡೆವು. ಇದರಲ್ಲಿ ಇಸ್ಲಾಮಾಬಾದ್ ಮತ್ತು ಲಾಹೋರಿನ ನಡುವಿನ ಮೋಟರ್‌ವೇ ಮತ್ತು ಬಾಹ್ಯಾಕಾಶ ಕೇಂದ್ರದಂತಿರುವ ಫೈಜಲ್ ಮಸೀದಿಗಳು ಸೇರಿಕೊಳ್ಳುತ್ತವೆ. ಈ ವೈಭವಯುತ ಕಟ್ಟಡಗಳ ಬಗ್ಗೆ ಪಾಕಿಸ್ತಾನೀಯರನೇಕರು 'ಘನತೆವೆತ್ತ ನಿರ್ಮಾಣಗಳು' ಎಂದು ಹೆಮ್ಮೆಪಡುತ್ತಾರೆ. ಐ.ಎ. ರೆಹಮಾನ್ ಎಂಬ ಮಾನವ ಹಕ್ಕುಗಳ ಕ್ರಿಯಾವಂತರ ಪ್ರಕಾರ ಅವು ಪಾಕಿಸ್ತಾನವನ್ನು ಪ್ರತಿನಿಧಿಸುವುದಿಲ್ಲ. ರಾಜಧಾನಿಯ ಬಗ್ಗೆ ನಾವು ಕೇಳಿದ ಒಂದು ಪ್ರಸಿದ್ಧ ಹಾಸ್ಯೋಕ್ತಿಯೆಂದರೆ, ಇಸ್ಲಾಮಾಬಾದ್ ಒಂದು ಸುಂದರ ನಗರ. ಅದು ಪಾಕಿಸ್ತಾನದಿಂದ ಕೇವಲ ಹತ್ತು ಕಿಲೊಮೀಟರ್ ದೂರದಲ್ಲಿದೆ. ನಿಜವಾದ ಪಾಕಿಸ್ತಾನವೆಂದರೆ ಇಸ್ಲಾಮಾಬಾದಿಗೆ ಹೊಂದಿಕೊಂಡಿರುವ ಜನಜಂಗುಳಿಯಿರುವ ಹಳೆಯ ನಗರ ರಾವಲ್ಪಿಂಡಿ.

ಪಾಕಿಸ್ತಾನದಲ್ಲಿ ನಾವು ಬಿಸಿ ಸುದ್ದಿ ಆಗಿದ್ದೆವು. ನನ್ನ ಕನಸಿನಲ್ಲೂ ನಾನಿಷ್ಟೊಂದನ್ನು ಬಯಸಿರಲಿಲ್ಲ. ಜನರು ನಮ್ಮನ್ನು ಭೇಟಿ ಮಾಡಲು, ಮನರಂಜಿಸಲು, ನಮ್ಮ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು, ತಮ್ಮದನ್ನು ಹಂಚಿಕೊಳ್ಳಲು ಬಯಸುತ್ತಿದ್ದರು. ಸ್ವಯಂ ಸ್ಫೂರ್ತಿಯ ಆದರಾತಿಥ್ಯ ಮಾತ್ರ ಇದಕ್ಕೆ ಕಾರಣವಾಗಿರಲಿಲ್ಲ. ಎರಡೂ ದೇಶಗಳ ನಡುವೆ ನೇರ ಸಂಪರ್ಕದ ಮಹತ್ವವೇನೆಂಬುದರ ಅರಿವು ಉಂಟಾಗಿದ್ದುದೇ ಇದಕ್ಕೆ ಕಾರಣವಾಗಿತ್ತು. ಅದರಿಂದಲೇ ಪಾಕಿಸ್ತಾನೀಯರ ಒಂದು ವ್ಯಾಪಕವಾದ ವಲಯದೊಂದಿಗೆ ಸಂವಾದಿಸುವುದು ಸಾಧ್ಯವಾಯಿತು. ವಲಯದಲ್ಲಿ ರಾಜಕಾರಣಿಗಳು, ನ್ಯಾಯಮೂರ್ತಿಗಳು, ಪಂಡಿತರು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು, ಮಾನವ ಹಕ್ಕುಗಳ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಕ್ರಿಯಾವಂತರು, ರೈತರು, ವ್ಯಾಪಾರಿಗಳು, ಟ್ಯಾಕ್ಸಿ ಚಾಲಕರು ಇದ್ದರು.

ನಾನು ಈಗ ಭೇಟಿ ಮಾಡಿದವರಲ್ಲಿ ಅನೇಕರು ಕೇಳುತ್ತಾರೆ: ಪಾಕಿಸ್ತಾನೀಯರು ನಮ್ಮ ಬಗ್ಗೆ ಏನನ್ನು ಯೋಚಿಸುತ್ತಾರೆ?

ಈ ಪ್ರಶ್ನೆಗೆ ನ್ಯಾಯ ಒದಗಿಸುವ ಭರವಸೆ ನನಗಿರುವುದು ಸಾಧ್ಯವೇ ಇಲ್ಲ. ಪಾಕಿಸ್ತಾನವೊಂದು ದೊಡ್ಡ ಹಾಗೂ ವಿಭಿನ್ನವಾದ

ದೇಶ. ಸಂಚಿನ ರಾಜಕೀಯ ಹೊಂದಿದೆ. ಒಂದೇ ಸ್ಥಳದಲ್ಲೂ ವಿಭಿನ್ನ ವ್ಯಕ್ತಿಗಳು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಇವು ಕೆಲವೊಮ್ಮೆ ತಾವು ಸೇರಿರುವ ವರ್ಗ ಅಥವಾ ಗುಂಪಿಗೆ ವಿಶಿಷ್ಟವಾಗಿರುತ್ತವೆ. ಕೆಲವೊಮ್ಮೆ ಇಂಥ ವ್ಯತ್ಯಾಸಗಳು ನಂಬಲ ಸಾಧ್ಯವಾಗಿರುತ್ತದೆ. ಉದಾಹರಣೆಗೆ, ನ್ಯಾಷನಲ್ ಕಾಲೇಜ್ ಆಫ್ ಆರ್ಟ್ಸ್ ಎಂಬ ಅತ್ಯಂತ ಶ್ರೇಷ್ಠ ಸಂಸ್ಥೆಯ ಮುಖ್ಯಪ್ರಾಂಗಣದಲ್ಲಿ ತೂಗುಯ್ಯಾಲೆಯ ಮೇಲೆ ಉದ್ರೇಕಕಾರಿ ಚುಂಬನದಲ್ಲಿ ಮೈ ಮರೆತಿರುವ ಇಬ್ಬರು ವ್ಯಕ್ತಿಗಳ ಮಾನವ ಗಾತ್ರದ ಪ್ರತಿಮೆಯೊಂದನ್ನು ಸಾವು ಗಮನಿಸಿದೆವು. ಕಾಲೇಜಿನ ಸಾಮಾನ್ಯ ವಾತಾವರಣವು ರಸ್ತೆಯ ಇನ್ನೊಂದು ಬದಿಯಲ್ಲಿರುವ ಪಂಜಾಬ್ ವಿಶ್ವವಿದ್ಯಾನಿಲಯದಕ್ಕೆ ವಿರುದ್ಧವಾದುದಾಗಿತ್ತು. ಇಲ್ಲಿ (ಪಂಜಾಬ್ ವಿ.ವಿ) ಮಹಿಳೆಯರು ಬುರ್ಖಾದಲ್ಲಿರುತ್ತಾರೆ.

ಕ್ಯಾಂಟೀನುಗಳು ಕೂಡ ಪ್ರತ್ಯೇಕವಾಗಿದ್ದವು

ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ ನಡೆದ ಸಭೆಗಳಲ್ಲಿ ಅನೇಕ ಬಾರಿ ರಾಜಕೀಯ ಸವಾಲುಗಳು ಅಂದರೆ ಕಾಶ್ಮೀರ, ಹಿಂದೂ ಹಕ್ಕು, ಭಾರತೀಯ ಪ್ರಜಾಪ್ರಭುತ್ವ ಮುಂತಾದವುಗಳನ್ನು ಕುರಿತಂತೇ ನೇರ ಸವಾಲುಗಳನ್ನು ಎದುರಿಸಬೇಕಾಯಿತು. ಅದಲ್ಲದೆ ಅನೇಕರು ಬೇರೆ ಬೇರೆ ವಿಧಗಳಲ್ಲಿ ನಮಗೆ ಪ್ರತಿಕ್ರಿಯಿಸಿದರು: ಲಾಹೋರಿನ ವಸ್ತುಸಂಗ್ರಹಾಲಯದಲ್ಲಿ ಶಾಲಾಬಾಲಕನೊಬ್ಬ 'ದುಬೈ ಭಾರತದಲ್ಲಿದೆಯೇ?' ಎಂದು ನನ್ನನ್ನು ಕೇಳಿದ. ಪೇಷಾವರದಲ್ಲಿ ನಮ್ಮ ರಕ್ಷಣೆಗಾಗಿ ನಮ್ಮೊಡನಿದ್ದ ಪೊಲೀಸ್‌ನೊಬ್ಬ 'ಭಾರತೀಯ ಚಲನಚಿತ್ರ ತಾರೆಯರು ಚಲನಚಿತ್ರಗಳಲ್ಲಿ ಕಾಣುವಂತೆ ನಿಜವಾಗಲೂ ಸುಂದರರಾಗಿದ್ದಾರೆಯೇ?' ಎಂದು ತಿಳಿಯಲು ಬಯಸುತ್ತಿದ್ದ. ಇನ್ನೊಬ್ಬ ಕಂಪ್ಯೂಟರ್ ವೃತ್ತಿಯ ಬಗ್ಗೆ ಕುತೂಹಲ ವ್ಯಕ್ತಪಡಿಸಿದ.

ನನ್ನ ಜೀವನವನ್ನೆಲ್ಲಾ ಇಲ್ಲಿಯೇ ಕಳೆದು, ಇತರರನ್ನು ಅರ್ಥಮಾಡಿಕೊಂಡಿರುವ ನನಗೆ ರಾಷ್ಟ್ರಮಟ್ಟದಲ್ಲಿ ಒತ್ತಿ ಹೇಳುತ್ತಿರುವ ಸವಾಲುಗಳಿಗೂ, ಅನೇಕರು ಅದರಲ್ಲೂ ವಿಶೇಷವಾಗಿ ಬಡವರು ಮತ್ತು ಅಶಿಕ್ಷಿತರಿಗೂ ಹಾಗೂ ಇನ್ನೊಂದು ಕಡೆ ಅವರು (ಸರಕಾರ) ಗುರುತಿಸುವ ಮತ್ತು ಸಹಾನುಭೂತಿ ವ್ಯಕ್ತಪಡಿಸುವ ಬಡಜನರಿಗೂ ಯಾವುದೇ ಸಂಬಂಧವಿರುವುದಿಲ್ಲ. ಕುತೂಹಲಕರ ಸಂಗತಿಯೆಂದರೆ, ಐ ಎಸ್ ಐ ಬಗೆಗೆ ಅನೇಕರಿಗೆ ಏನೂ ತಿಳಿದಿರಲಿಲ್ಲ. ಆದರೆ ನಾನು ಅಪರೂಪವಾಗಿ ಕೇಳಿಬಲ್ಲ ಇಂಡಿಯನ್ ಫಾರಿನ್ ಇಂಟೆಲಿಜೆನ್ಸ್ ಏಜನ್ಸಿ (RAW-Research and Analysis Wing) ಯ ಚಟುವಟಿಕೆಗಳ ಬಗ್ಗೆ ಹೆಚ್ಚು ತಿಳಿದಿದ್ದರು. ಈ ಎರಡೂ ದೇಶಗಳ ನಡುವಿನ ದ್ವೇಷದ ಬಗ್ಗೆ ಪಾಕಿಸ್ತಾನದ ಜನರನ್ನು ಕೇಳಿದಾಗ ಅವರು ಅನೇಕ ಬಾರಿ ಹೇಳಿರುವುದನ್ನು ಕೇಳಿದ್ದೇನೆ: "ಯೆ ತೊ ಹುಕೂಮತೋಂ ಔರ್ ಹುಕೂಮತ್ ಚಲಾನೆವಾಲೋಂ ಕಿ ಕರನಿ ಹೈ"

ಆ ಹಳ್ಳಿಯ ವ್ಯಕ್ತಿಯೊಬ್ಬ ಹೇಳುತ್ತಿದ್ದ: 'ಜಿನ್ ಹೋನೆ ಮುಲ್ಕೋಂಕೆ ಬೀಚ್ ಮೆ ಲಕೀರೆ ಕೀಂಚನಿ ಹೈ, ಉನ್ ಹೋನೆ ಲೋಗೋಂ ಕೆ ದಿಲ್ ಮೆ ಭೀ ಲಕೀರೇಂ ಕೀಂಚನಾ ಶುರು ಕರ್ ದಿಯೊ ಹೈ' (ರಾಷ್ಟ್ರಗಳ ನಡುವೆ ಯಾರು ಈ ಗಡಿಗಳನ್ನು ಎಳೆದಿದ್ದಾರೋ ಅವರು ಜನರ ಹೃದಯಗಳಲ್ಲೂ ಗಡಿಗಳನ್ನೆಳೆಯಲು ಪ್ರಾರಂಭಿಸಿದ್ದಾರೆ.)

ಇದನ್ನು ಇಲ್ಲಿಯ ನನ್ನ ಗೆಳತಿಗೆ ಹೇಳಿದೆ. 'ಅದಕ್ಕೆ ಕಾರಣವೆಂದರೆ, ಅನೇಕರಿಗೆ ದೇಶದ ಇತಿಹಾಸ ಮಾತ್ರವಲ್ಲ, ಯಾವ ಆಗುಹೋಗುಗಳ ಬಗೆಗೂ ತಿಳಿದಿಲ್ಲ', ಎಂದು ಅವಳೆಂದಳು. ಇದು ಬಹುಶಃ ನಿಜವಿರಬಹುದು, ಹಾಗಿದ್ದಲ್ಲಿ, ನಾವು ನಮ್ಮ ಚಿಂತನೆಯನ್ನು ರೂಪಿಸುವಲ್ಲಿ 'ಇತಿಹಾಸಗಳು' ಮತ್ತು ಶಿಕ್ಷಣಗಳು ವಹಿಸುವ ಪಾತ್ರಗಳ ಕಡೆಗೂ ನೋಡುವ ಅಗತ್ಯವಿದೆ. ಪಾಕ್ ಮತ್ತು ಭಾರತಗಳ ವೇದಿಕೆಯ ಸದಸ್ಯರು ಪುನರುಚ್ಚರಿಸಿದಂತೆ ನಮ್ಮ ಪಠ್ಯಪುಸ್ತಕಗಳು ಪಕ್ಷಪಾತ ಮತ್ತು ದ್ವೇಷಗಳ ಬದಲಿಗೆ ಸತ್ಯ ಮತ್ತು ಸ್ನೇಹಗಳನ್ನು ಎತ್ತಿ ತೋರಿಸಬೇಕು.

ಹಲವು ವರ್ಷಗಳ ಕಾಲ ಭಾರತವನ್ನು ಒಂದು ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ರಾಷ್ಟ್ರವಾಗಿ ನೋಡಿದ್ದೇವೆ. ಕಳೆದ ದಶಕದಲ್ಲಿ ಧಾರ್ಮಿಕ ಮೂಲಭೂತವಾದ ಹೆಚ್ಚುತ್ತಿರುವುದು ಅನೇಕರನ್ನು ಚಿಂತೆಗೀಡುಮಾಡಿದೆ. ಬೇರೆ ದೇಶಗಳಲ್ಲಿಯೂ ಆಗುತ್ತಿರುವ ಇಂಥದೇ ಬೆಳವಣಿಗೆಯೊಂದಿಗೆ ಇದು ಇಡೀ ಉಪಖಂಡದಲ್ಲಿ ಬಿರುಗಾಳಿಯೆಬ್ಬಿಸಬಹುದೆಂದು ಭಾವಿಸಲಾಗಿತ್ತು. ಈ ಎರಡೂ ದೇಶಗಳ ಮಾಧ್ಯಮಗಳು ಈ ವಿಚಾರಕ್ಕೆ ಮಾತ್ರ ವಿಶೇಷ ಪ್ರಾಧಾನ್ಯ ನೀಡುವ ಮೂಲಕ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿರುವಂತಿದೆ. ಉಪಗ್ರಹ ಚಾನೆಲ್‌ಗಳು ಭಾರತದಲ್ಲಿ ಮುಖ್ಯವಾಗಿ ಮಧ್ಯಮ ವರ್ಗದವರನ್ನು ಗುರಿಯಾಗಿಟ್ಟುಕೊಂಡಿದ್ದರೆ, ಪಾಕಿಸ್ತಾನದ ಅನೇಕ ಮನೆಗಳಲ್ಲಿ ಭಾರತೀಯ ಚಲನಚಿತ್ರಗಳು ಬಹಳ ಜನಪ್ರಿಯವಾಗಿವೆ. ದುರದೃಷ್ಟಕರ ಸಂಗತಿಯೆಂದರೆ, ಇದು ಭಾರತದಲ್ಲಿ ಸತ್ಯ ಏನೆಂಬುದನ್ನು ಬಿಂಬಿಸಲು ನೆರವಾಗಿಲ್ಲ ಎನ್ನುವುದು. ಯಾವುದು ಎರಡೂ ದೇಶಗಳ ಜನತೆಯನ್ನು ಒಂದುಗೂಡಿಸುವ ಒಂದು ಪ್ರಮುಖ ಸಾಧನವಾಗಬಹುದಾಗಿತ್ತೋ ಅದು ಅವರನ್ನು ಪರಸ್ಪರರಿಂದ ದೂರ ಮಾಡುವ ಕೆಲಸ ಮಾಡುತ್ತಿದೆ. ಈ ಚಾನೆಲ್‌ಗಳು ಮತ್ತು ಪ್ರದರ್ಶಿತವಾಗುವ ಚಲನಚಿತ್ರಗಳು ಪ್ರಮುಖವಾಗಿ ಮೇಲು

ಮಧ್ಯಮ ವರ್ಗದವನ್ನು ಪ್ರತಿಬಿಂಬಿಸುವುದರ ವಿರುದ್ಧ ನಾವು ಸತತವಾದ ಹೋರಾಟವನ್ನು ನಡೆಸಬೇಕಾಯಿತು.

ಅಲ್ಲಿಂದ ಹಿಂದಿರುಗಿದ ನಂತರದ ಕೆಲವು ದಿನಗಳು ನಾನು ದಿಗ್ಭ್ರಮೆಗೊಂಡಿದ್ದೆ/ದಿಙ್ಮೂಢನಾಗಿದ್ದೆ. ನಾನು ಕಂಡ, ಅಂದುಕೊಂಡ ಹಾಗೂ ಅನುಭವಿಸಿದ ಎಲ್ಲವನ್ನೂ ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಾನು ನಂಬಲ ಸಾಧ್ಯವಾದುದೊಂದಕ್ಕೆ ನಾನು ಎಡವಿಬಿದ್ದದ್ದು ನಿಜವೇ ಆಗಿತ್ತು. ಇಷ್ಟು ವರ್ಷಗಳ ಕಾಲ ನಾನು ನಂಬಿಕೊಂಡು ಬಂದಿದ್ದ ಒಂದು ದೊಡ್ಡ ಸುಳ್ಳನ್ನು ಹಾಗೆ ನಂಬುವುದನ್ನು ಮುಂದುವರಿಸಿದ ಅನೇಕರನ್ನು, ಅದರ ಅಸತ್ಯವನ್ನು ನಾನು ಒಪ್ಪಿಕೊಳ್ಳ ಬಯಸುತ್ತಿರಲಿಲ್ಲ. ಇಷ್ಟು ದೀರ್ಘಕಾಲದವರೆಗೆ ನಾವು ಯುದ್ಧ ಮಾಡುತ್ತಾ ಬಂದಿದ್ದೇವೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಗೆ ವಿವರಿಸಲು ಸಾಧ್ಯ? ಇಷ್ಟೊಂದು ಹತ್ತಿರವಿರುವ ಆ ಜನರನ್ನು ಅದೆಷ್ಟು ದೂರ ಇಟ್ಟಿದ್ದೇವೆ ! ಇದು ಒಂದು ಒಳ್ಳೆಯ ಪೂರ್ವ ಯೋಜಿತ ಯೋಜನೆ ಎಂದನ್ನಿಸಿತು. ಆದರೆ ಯಾರ ಯೋಜನೆ? ಕೆನ್ಯಾ ಮತ್ತು ಐಸ್‌ಲ್ಯಾಂಡ್‌ಗಳಂಥ ದೂರದ ಸ್ಥಳಗಳನ್ನು ಕುರಿತ ಸುದೀರ್ಘ ಲೇಖನಗಳು ಹಾಗೂ ಚಿತ್ರಲೇಖನಗಳನ್ನು ವಾರವಾರಕ್ಕೆ ಕಾಣುತ್ತಿರುತ್ತೇವೆ. ಆದರೆ ನೆರೆಯಲ್ಲೇ ಬಿಂಬಿಸಿ, ಅದನ್ನೇ ಗಟ್ಟಿಗೊಳಿಸುವ ಸುದ್ದಿ-ವರದಿಗಳನ್ನು ಬಿಟ್ಟರೆ ಬೇರೇನು ಕಾಣುತ್ತಿಲ್ಲ.

ನಾವು ಭೇಟಿಯಾದ ಜನರ ತೆರೆದ ಹಾಗೂ ವಿಶಾಲ ಹೃದಯದ ಬಗ್ಗೆ ವಿವರಿಸುವುದು ಅಸಾಧ್ಯ. ಅದಕ್ಕೆ ಸಂಪ್ರದಾಯ ಮಾತ್ರವಲ್ಲ, ಅದಕ್ಕೂ ಹೆಚ್ಚಿನದ್ದೇನೋ ಇರುವಂತೆ ಕಾಣುತ್ತದೆ. ಜಾತಿ ಧೋರಣೆಗಳು ಬೇರು ಬಿಟ್ಟಿರುವ ಸಮಾಜದಿಂದ ಬಂದವರಿಗೆ ಪಾಕಿಸ್ತಾನೀಯರ ಸಹಜ ಪ್ರೀತಿಯೂ ಅಸಹಜವಾಗಿ ಕಂಡಿತು. ಅದಕ್ಕೆ ಇರುವ ಸ್ಪಷ್ಟೀಕರಣವೆಂದರೆ, ಅದು ಸಹಜವಾದುದು ಎನ್ನುವುದು. ಇಡೀ ಹಳ್ಳಿ ಪುರುಷರು ಮತ್ತು ಮಹಿಳೆಯರು, ಹಿರಿಯರು ಮತ್ತು ಕಿರಿಯರು ಬಯಲಿನಲ್ಲಿ ನರ್ತಿಸಲು ಇನ್ನೊಂದು ದಿನ ಬರುವುದಿಲ್ಲ. ಅದು ನಮ್ಮಿಂದಾಗಿ ನಡೆಯಿತು, ಅಲ್ಲಿದ್ದ ಭಾರತೀಯರಿಂದಾಗಿ.

ಈ ಪ್ರವಾಸದ ಅವಧಿಯಲ್ಲಿ ಮತ್ತು ಅನಂತರದಲ್ಲಿ ಒಂದು ಉತ್ತಮ ಬದಲಾವಣೆಯನ್ನು ನನ್ನಲ್ಲಿ ಕಂಡುಕೊಂಡೆ. ಜನರ ಚಿಂತನೆಯನ್ನು ಮತ್ತು ಧೋರಣೆಗಳನ್ನು ತಿಳಿಯುವ ಕುತೂಹಲವೇ ಅದಾಗಿತ್ತು. ಅವರು ಕ್ಷೌರಿಕರಾಗಿರಲಿ, ಚಾಲಕರಾಗಿರಲಿ ಅಥವಾ ಉನ್ನತ ಮಟ್ಟದ ಸರಕಾರಿ ನೌಕರರಾಗಿರಲಿ, ಸುದ್ದಿ ಸಮಾಚಾರ ಗಳಲ್ಲಿರುವ ಅಪ್ಪಟ ಸುಳ್ಳುಗಳನ್ನು ಮೀರಿದ ಮತ್ತೇನನ್ನೋ ಕಾಣಲು ಅದು ನೆರವಾಯಿತು. ನನ್ನ ನಗರದ ಸಿನಿಸಿಸಂ (cynicism) ಈಗ ಕಾಣೆಯಾಗಿದೆ. ಅದರ ಸ್ಥಾನದಲ್ಲಿ ಮಾನವ ಸ್ವಭಾವದಲ್ಲಿ ದ್ವೇಷ ಮತ್ತು ಸಂದೇಹಗಳಿಗಿಂತ ಸ್ನೇಹ ಮತ್ತು ನಂಬಿಕೆಗಳಿಗೆ ಹೆಚ್ಚು ಒಲವು ಇದ್ದೆಯೆನ್ನುವ ನಂಬಿಕೆ ಆವರಿಸಿದೆ. ಈಗಿರುವ ದ್ವೇಷ ಎರಡು ದೇಶಗಳಲ್ಲಿಯೇ ಹೊರತು ಜನರಲ್ಲಿ ಅಲ್ಲ. ಈ ದ್ವೇಷ ಎರಡೂ ದೇಶದ ಜನರ ಪರಸ್ಪರರ ಬಗೆಗಿರುವ ಭಾವನೆಗಳ ವಿಸ್ತರಣೆಯಂತೂ ಅಲ್ಲವೇ ಅಲ್ಲ. ಬದಲಿಗೆ ಎರಡೂ ದೇಶಗಳಲ್ಲಿ ಅಧಿಕಾರದಲ್ಲಿರುವ ಮಾತಾಡುವ ಅಲ್ಪಸಂಖ್ಯಾತರ ಕೈಚಳಕ ಮಾತ್ರ. ಇಂಥ ಪರಿಸ್ಥಿತಿಗೆ ತಂದೊಡ್ಡಿರುವ ಎರಡೂ ದೇಶಗಳಲ್ಲಿರುವ ಪ್ರಜಾಪ್ರಭುತ್ವದ ಸೋಲು ಕೂಡ ಇದಾಗಿದೆ. ಶಿವಾಜಿನಗರದ ಫುಟ್‌ಪಾತ್‌ಗಳಲ್ಲಿ ಸ್ವಿಟ್ಜರ್‌ಲ್ಯಾಂಡಿನ ಪ್ರಕೃತಿ ದೃಶ್ಯವಿರುವ ಚಿತ್ರವೊಂದು ನನಗೆ ನೆನಪಾಗುತ್ತದೆ : ಜನರ ನಡುವಿನ ಅತ್ಯಂತ ಕಡಿಮೆ ಅಂತರವೆಂದರೆ ತಿಳಿವಳಿಕೆ (Understanding is the shortest distance between people). ನನಗೆ ಇದು ಹಿಂದಿಗಿಂತ ಇಂದು ಹೆಚ್ಚು ಅರ್ಥಪೂರ್ಣವಾಗಿ ಕಾಣುತ್ತಿದೆ.

●

ವಿದ್ಯಾರ್ಥಿನಿಯರ ಮಾನಭಂಗ ಮಾಡಿ ಶಿಕ್ಷೆಗೆ ಗುರಿಯಾದ ಎರಡು ಪ್ರಕರಣಗಳು :

ಮಧ್ಯಪ್ರದೇಶದ ಶಾಲೆಯೊಂದರ ಶಿಕ್ಷಕ 13 ವರ್ಷದ ವಿದ್ಯಾರ್ಥಿನಿಯನ್ನು ಕರೆದೊಯ್ದು 15 ದಿನಗಳವರೆಗೆ ಬಂಧಿಸಿ ಅತ್ಯಾಚಾರ ನಡೆಸಿದ ಪ್ರಕರಣ ಬಯಲಾಗಿ ಆತನಿಗೆ 7 ವರ್ಷಗಳ ಜೈಲುವಾಸ ವಿಧಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ವಿಶ್ವವಿದ್ಯಾನಿಲಯದ ಸಹಾಯಕ ಪ್ರೊಫೆಸರ್ ತನ್ನ ವಿದ್ಯಾರ್ಥಿನಿಗೆ ಅಶ್ಲೀಲ ಭಾಷೆಯಲ್ಲಿ ಪತ್ರ ಬರೆದಿದ್ದ. 1994ರಲ್ಲಿ ಇದೇ ಪ್ರಕರಣಕ್ಕೆ ಹೂಡಲಾಗಿದ್ದ ಮೊಕದ್ದಮೆಗೆ ಇತ್ತೀಚೆಗೆ ತೀರ್ಪು ಹೊರ ಬಿದ್ದಿದ್ದು. ಆತ ಅಪರಾಧಿ ಎಂದು ಸಾಬೀತಾಗಿರುವ ಲೈಂಗಿಕ ದುರ್ನಡತೆಯ ಈ ಪ್ರಕರಣ ಅಷ್ಟಿಷ್ಟು ಸಮಾಧಾನ ಕೊಟ್ಟರೂ ರಿಯಾಲಿಟಿ ಗಂಭೀರವಾಗಿದೆ.

ಮೌನ ಮುರಿದು ಲೈಂಗಿಕ ಶೋಷಿತರು ಮಾತನಾಡಿದಾಗ.....

ಬಿ. ಎನ್. ಶಾರದ

ಅದೊಂದು ಅಪರೂಪದ ಚಾರಿತ್ರಿಕ ಕಾರ್ಯಕ್ರಮ. ಇದು ನಡೆದದ್ದು ಬೆಂಗಳೂರಿನ ಎಸ್.ಸಿ.ಎಮ್. ಹೌಸ್‌ನಲ್ಲಿ ಜುಲೈ 1ನೇ 2001 ರಂದು. ಈ ಕಾರ್ಯಕ್ರಮ ಲೈಂಗಿಕ ಶೋಷಿತರ ಹಕ್ಕುಗಳಿಗಾಗಿ ಇರುವ ಒಕ್ಕೂಟ ನಿಯೋಜಿಸಿತ್ತು. ತಮ್ಮ ನೋವಿನ ಅನುಭವವನ್ನಷ್ಟೇ ಅಲ್ಲದೆ ತಮ್ಮ ಅಭಿಲಾಷೆ ಏನೆಂದು ಹೇಳಿದವರು ಸಲಿಂಗ/ ದ್ವಿಲಿಂಗಕಾಮಿ ಹೆಂಗಸರು ಹಾಗೂ ಗಂಡಸರು, ಖೋತಿ, ಹಾಗೂ ಲಿಂಗ ಬದಲಾಯಿಸಿಕೊಂಡವರು (ಹಿಜ್ರಾ). ಇವರೊಂದಿಗೆ ಇವರ ಹಕ್ಕುಗಳಿಗೆ ಬೆಂಬಲವನ್ನು ತೋರಿಸುತ್ತಿರುವ ಇತರೆ ಸಂಘಟನೆಯ ಪ್ರತಿನಿಧಿಗಳು ಕೂಡ ಮಾತಾನಾಡಿದರು.

ಹೆಣ್ಣು ಸಲಿಂಗ/ದ್ವಿಲಿಂಗಕಾಮಿಗಳನ್ನು ಹಾಗೂ ಹಿಜ್ರಾಗಳನ್ನ ಒಳಗೊಂಡ "ಒಲಾವಾ" ಎಂಬ ಪೂನಾ ಗುಂಪಿನ ಪ್ರತಿನಿಧಿಸಿ ಮಾತಾನಾಡಿದವರು ಚತುರ. ಹೆಣ್ಣು ಹುಟ್ಟಿನಿಂದ ಅಪ್ಪನ ಅಥವಾ ಗಂಡನ ಗುರುತಿನ ಅಡಿಯಲ್ಲೇ ಬದುಕ ಬೇಕಾಗಿರುವ ಕಹಿ ಸತ್ಯದ ಬಗ್ಗೆ ಹೇಳಿದರು. ಲೈಂಗಿಕವಾಗಿ ಅವಳಿಗೆ ಅಲ್ಲಿ ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವ ಸಮ್ಮತಿಯಿಲ್ಲದೆ ಅವಳು ತನ್ನದಲ್ಲದ ಲಿಂಗದ ಜನರ ಬೇಕು ಬೇಡಿಕೆಗಳನ್ನು ಪೂರೈಸಲಷ್ಟೇ ತಯಾರಿಯನ್ನು ಹುಟ್ಟಿನಿಂದ ಪಡೆಯುತ್ತಾಳೆ. ಇದು ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಗೆ ಹೆಚ್ಚು ಬಲವನ್ನು ಹಾಗೂ ಅವಳಿಗೆ ನೋವನ್ನು ತಂದುಕೊಡುತ್ತದೆ. ಮಹಿಳಾ ಚಳುವಳಿ ಹಾಗೂ ಲೆಸ್‌ಬಿಯನ್ ಚಳುವಳಿ ನನಗೆ ನನ್ನದೇ ಆಯ್ಕೆಯನ್ನು ಮಾಡಿಕೊಳ್ಳಲು ನೆರವಾಗಿದೆ. ಲೆಸ್‌ಬಿಯನ್ ಪುರುಷ ಪ್ರಧಾನ ಸಂಸ್ಕೃತಿಗೆ ಬಲವಾದ ಪೆಟ್ಟಾಗಿರುವುದರಿಂದ ಅವರಿಗೆ ಹೆಣ್ಣು ಮತ್ತೊಬ್ಬ ಹೆಣ್ಣನ್ನು ಪ್ರೀತಿಸುವುದು ಒಪ್ಪಿಕೊಳ್ಳ ಲಾಗುತ್ತಿಲ್ಲ. ಯಾಕೆಂದರೆ ಅವರು ಸಾಗುತ್ತಿರುವ ಬಲದ ದೋಣಿ ಬಿರುಕು ಬಿಡುತ್ತದಲ್ಲ! ಹಾಗಾಗಿ ಅವಳು ಗಂಡು ಸಲಿಂಗಕಾಮಿಗಳಿಗಿಂತ ಹೆಚ್ಚಿನ ತುಳಿತಕ್ಕೆ, ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಇದು ಸ್ವೀಕರಿಸಲು ಸರಳವಾಗಿಲ್ಲವಾಗಿರುವುದರಿಂದಾಗಿ ನಾವು ಕುಟುಂಬದಿಂದ, ಸ್ನೇಹಿತರಿಂದ, ಸಮಾಜದಿಂದ ನಾನಾ ತರಹದ ಹಿಂಸೆಗೆ ಒಳಗಾಗುತ್ತೇವೆ. ಆದರೂ ನಮ್ಮ ಪ್ರೇಮಕ್ಕೆ ಇದನ್ನೆಲ್ಲ ಎದುರಿಸುವ ಶಕ್ತಿಯಿದೆ ಎಂದು ಅವರು ಮಾರ್ಮಿಕವಾಗಿ ಸ್ಪಷ್ಟಪಡಿಸಿದರು.

"ಫೇಸಿಂಗ್ ದ ಮಿರರ್" ಎಂಬ ಭಾರತದ ಸಲಿಂಗ / ದ್ವಿಲಿಂಗ ಕಾಮಿ ಮಹಿಳೆಯರ ಜೀವನಾನುಭವವನ್ನು ಸಂಪಾದಿಸಿರುವ ಅಶ್ವಿನಿ ಸುಖ್ತಂಕರ್, ಫೈರ್ ಚಿತ್ರ ಬಿಡುಗಡೆ ಯಾದಾಗ ದೆಹಲಿ ಹಾಗೂ ಮುಂಬೈನಲ್ಲಿ ಶಿವಸೇನೆಯು ಎಬ್ಬಿಸಿದ ದಾಂದಲೆ ಸಮಯದಲ್ಲಿ ಅಸ್ತಿತ್ವಕ್ಕೆ ಬಂದ "ಕ್ಯಾಂಪೇಯನ್ ಫಾರ್ ಲೆಸೆಬಿಯನ್ ರೈಟ್ಸ್" ಎಂಬ ಗುಂಪಿನ ಬಗ್ಗೆ ತಿಳಿಸಿದರು. ಹಾಗೂ ಅದು ತೆಗೆದುಕೊಂಡ ನಿರ್ಧಾರ ತುಳಿದ ಹಾದಿಯ ಬಗ್ಗೆ ಕೂಡ ವಿವರಿಸಿದರಾಕೆ. ಮಹಿಳಾ ಚಳುವಳಿ ಹಾಗೂ ಮಾನವ ಹಕ್ಕುಗಳ ಚಳುವಳಿ ಲೆಸ್‌ಬಿಯನ್ ವಿಚಾರವನ್ನು ತನ್ನ ಕಕ್ಷೆಯೊಳಗೆ ತೆಗೆದುಕೊಳ್ಳದ ಕಾಲ ಒಂದಿತ್ತು, ಆದರೆ ಈಗ ನಿಧಾನವಾಗಿ ಯಾದರು ಅದು ಆ ವಿಚಾರದಲ್ಲಿ ಗಮನಹರಿಸಿ ಕಾರ್ಯಪ್ರವೃತ್ತ ವಾಗಿರುವ ಬಗ್ಗೆ ತಮ್ಮ ಸಮಾಧಾನ ವ್ಯಕ್ತ ಪಡಿಸಿದರು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿನಿಧಿಗಳು ನಮ್ಮಲ್ಲಿ ಸಲಿಂಗಕಾಮಿಗಳಿಲ್ಲವೆಂದು ಪ್ರಚಾರಕ್ಕೆ ತೊಡಗಿದ್ದಾಗ, ನಾವು ಇಲ್ಲೇ ಇದ್ದೇವೆ ಎಂಬ ಕೂಗನ್ನು ಎಬ್ಬಿಸಲು ಕ್ಯಾಲೇರಿಗೆ ಸಾಧ್ಯವಾಯಿತೆಂದು ಕೂಡ ಅವರು ತಿಳಿಸಿದರು.

ಫೆಮಿಲಾ ಗಂಡಾಗಿ ಹುಟ್ಟಿ ಈಗ ಲಿಂಗ ಪರಿವರ್ತನೆ ಮಾಡಿ ಕೊಂಡಿರುವವರು. ಅವರ ಸಮುದಾಯದ ಇತರರಂತೆ ಅವರೂ ಕೂಡ ಸೆಕ್ಸ್ ವರ್ಕ್ ಮಾಡುತ್ತೇನೆಂದು ಹೇಳಿದ ಆಕೆ, ತಮ್ಮ ಇಡೀ ಸಮುದಾಯ ಎದುರಿಸುತ್ತಿರುವ ದೈಹಿಕ ಹಾಗೂ ಮಾನಸಿಕ ಹಿಂಸೆ ಹೇಗೆ ವ್ಯವಸ್ಥಿತವಾಗಿ ಪೊಲೀಸರಿಂದ ಮತ್ತು ಗೂಂಡಾಗಳಿಂದ ನಡೆಯುತ್ತದೆಂದು ತಿಳಿಸಿದರು. ನಮಗೆ ಮತದಾನದ ಹಕ್ಕಾಗಲಿ, ಪಡಿತರ ಚೀಟಿಯಾಗಲೀ, ಸರ್ಕಾರೀ ನೌಕರಿಯಾಗಲಿ ಇಲ್ಲವೆಂದು ಹೇಳಿದರು. ಹಾಗಾಗೀ ಜೀವನೋಪಾಯಕ್ಕೆ ಹೆಚ್ಚಾಗಿ ಎಲ್ಲರೂ ಸೆಕ್ಸ್ ವರ್ಕ್‌ನ್ನು ಅವಲಂಬಿಸಿರುವುದಾಗಿ ತಿಳಿಸಿದರು. ಕುಟುಂಬದ ಒಪ್ಪಿಗೆಯಿಲ್ಲದೆ, ಪೊಲೀಸರೂ ಕೂಡ ತಮ್ಮ ಗುಪ್ತಾಂಗಗಳನ್ನು ಮುಟ್ಟಿ ಅಸಭ್ಯವಾಗಿ ನಡೆಸಿಕೊಳ್ಳುತ್ತಾರಲ್ಲದೆ ಎಷ್ಟೋಸಾರಿ ಅವರೆ ಸಾಮೂಹಿಕವಾಗಿ ಅತ್ಯಾಚಾರವೆಸಗುತ್ತಾರೆಂಬ ತಮ್ಮ ನೋವನ್ನು ತೋಡಿಕೊಂಡು ಶಸ್ತ್ರಚಿಕಿತ್ಸೆಯ ಅವ್ಯವಸ್ಥೆಯನ್ನು ಹಾಗೂ ತಮ್ಮನ್ನು ಮನುಷ್ಯರಂತೆ ನೋಡಿ ಎಂಬ ಅವರ ನೋವಿನ ಧ್ವನಿ ಎಂಥವರ ಮನವನ್ನು ಕಲಕುವಂತಿತ್ತು. ಇವರು 'ಸಂಗಮ' ಗುಂಪನ್ನು ಪ್ರತಿನಿಧಿಸಿದ್ದರು.

'ಗುಡ್ ಯಾಸ್ ಯು' ಹಾಗೂ ಎ.ಎಲ್.ಎಫ್. ಅನ್ನು ಪ್ರತಿನಿಧಿಸಿ ಮಾತನಾಡಿದ ಅರವಿಂದ್ ತಾವು ಬೆಂಗಳೂರಿನಲ್ಲಿ ಲೈಂಗಿಕ ಶೋಷಿತರ ಮೇಲೆ ನಡೆಯುವ ದೌರ್ಜನ್ಯದ ವರದಿಯನ್ನು ಮಾನವ ಹಕ್ಕುಗಳ ಸಂಘಟನೆ ಹೊರತಂದಿದೆ, ಅದರ ಭಾಗವಾಗಿದ್ದಾಗ ತಾವು ಕಂಡ ಕಹಿ ವಿಚಾರವನ್ನು ಇಲ್ಲಿ ಹಂಚಿಕೊಂಡರು. ಹೋಮೋಫೋಬಿಯಾ ಹೇಗೆ ವ್ಯವಸ್ಥಿತವಾಗಿ ಸಾಮಾಜಿಕ - ಸಾಂಸ್ಕೃತಿಕ ಸ್ಥರಗಳಲ್ಲಿ, ಕುಟುಂಬದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸದ ಜಾಗದಲ್ಲಿ , ವೈದ್ಯಕೀಯ ಹಾಗೂ ಮಾಹಿತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ವಿವರಿಸಿದರು. ಇದರ ಜೊತೆ ಜಾತಿ, ಲಿಂಗ, ಭಾಷೆ, ವರ್ಗ ಕೂಡ ಮಹತ್ತರ ಪಾತ್ರ ವಹಿಸುತ್ತದೆಂಬುದನ್ನು ಅವರು ತಿಳಿಸಿದರು.

ಓಜಯಿಸ್ ಖಾನ್ 'ಗುಡ್ ಯಾಸ್ ಯು' ಹಾಗೂ 'ಸಹಾಯ'ವನ್ನು ಪ್ರತಿನಿಧಿಸಿ ಮಾತನಾಡುತ್ತಾ ಸಲಿಂಗ/ ದ್ವಿಲಿಂಗ ಕಾಮಿಗಳಿಗೆ ತಮ್ಮದೇ ಆಸ್ತಿಯನ್ನು, ಇನ್ಶೂರೆನ್ಸ್ ಹಾಗೂ ವೈದ್ಯಕೀಯ ಸೌಲಭ್ಯವನ್ನು ತಮ್ಮ ಸಲಿಂಗ ಸಂಗಾತಿಗೆ ಕೊಡುವುದರಲ್ಲಿ ಯಾವುದೇ ಬೆಂಬಲವಿಲ್ಲದಿರುವುದನ್ನು ಬಿಡಿ ಬಿಡಿಯಾಗಿ ವಿವರಿಸಿದರು. ದತ್ತು ಹಾಗೂ ಇನ್ನಿತರೆ ವಿಚಾರವನ್ನು ಹಂಚಿಕೊಂಡರು. ಪ್ರತಾಪ್ ಜ್ಯೋತಿಗಳನ್ನು ಪ್ರತಿನಿಧಿಸಿದರು, ಬಾಲ ಕೂಡ ಮಾತನಾಡಿದರು.

ಸಬ್‌ರಂಗ್ ಅನ್ನು ಪ್ರತಿನಿಧಿಸಿದ್ದ ಮನೋಹರ್ ಸ್ವಾಯತ್ತ ಗುಂಪಾದ ಇದು ಹೆಟ್ರೋಸೆಕ್ಸುಯಲ್‌ಗಳನ್ನು ಒಳಗೊಂಡಿರುವುದು ಹಾಗೂ ಎಲ್ಲಾ ತರಹದ ಲೈಂಗಿಕ ಹಕ್ಕಿಗಾಗಿ ಹೋರಾಡುವುದೆಂದು ತಿಳಿಸಿದರು. ಇದು ಇದುವರೆಗೆ ನಡೆಸಿರುವ ಚಟುವಟಿಕೆಗಳನ್ನು ಹಾಗೂ ಇಂತಹ ಒಂದು ಕಲೆಕ್ಟಿವ್‌ನ ಅವಶ್ಯಕತೆ ಬಗ್ಗೆ ಕೂಡ ತಿಳಿಸಿದರು.

ಎ.ಎಲ್.ಎಫ್. ಸಂಜಯ್ ಮಾತನಾಡಿ 'ಇರುವಿಕೆ'ಯೇ ಇಲ್ಲದ ಹಿಜ್ರಾಗಳ ಬಹುವಿಧದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು ಹಾಗೂ ತಾವು ಅವರ ನೆರವಿಗೆ ಹೋದಾಗ ಯಾವ ಕಾನೂನಿನ ಕಕ್ಷೆಯಿಂದ ಇವರನ್ನು ನೋಡುವುದು ಹಾಗೂ ಬಿಡಿಸುವುದು ಎಂಬ ಗೊಂದಲದ ಅನುಭವವನ್ನು ಅಧಿಕಾರಿಗಳ ಅಸಡ್ಡೆ ಹಾಗೂ ಬೇಜವಾಬ್ದಾರಿತವನ್ನು ಸ್ಪಷ್ಟಪಡಿಸಿದರು. ಇವರಿಗೆ ಪಾಸ್‌ಪೋರ್ಟ್‌ನ ತೊಂದರೆ, ಮತದಾನದ ತೊಂದರೆ ಹಾಗೂ ಇತರೆ ಸಮಸ್ಯೆಗಳನ್ನು ಹೇಗೆ ನೋಡಬೇಕೆಂಬ ತಮ್ಮ ಮನದಾಳದ ನೋವನ್ನು ವ್ಯಕ್ತಪಡಿಸಿದರು.

ಮಾನಸ ಹಾಗೂ ವಿಮೋಚನಾ ಮಹಿಳೆ ಗುಂಪುಗಳು ತಮ್ಮ ಬೆಂಬಲ ವ್ಯಕ್ತಪಡಿಸಿದವು, ಡಾ. ಕೆ. ಸಿ. ಅಬ್ರಹಾಂ(ಯು.ಟಿ.ಸಿ.) ಕೂಡ ತಮ್ಮ ಬೆಂಬಲ ಇವರೊಂದಿಗಿದೆಯೆಂದು ಸ್ಪಷ್ಟಪಡಿಸಿದರು.

ಎಲ್ಲಾ ಜನರನ್ನು ಒಳಗೊಂಡ ಇಂತಹ ವಿಶೇಷ ಕಾರ್ಯಕ್ರಮ ಈ ಹಿಂದೆ ಭಾರತದಲ್ಲಿ ನಡೆದೇ ಇಲ್ಲದರಿಂದ ಇದಕ್ಕೆ ಇನ್ನಷ್ಟು ಮಹತ್ವ. ಸುಮಾರು 200 ಜನರು ಇದರಲ್ಲಿ ಭಾಗವಹಿಸಿದ್ದರು.

ಸಲಿಂಗ/ದ್ವಿಲಿಂಗ ಕಾಮವನ್ನು ತುಚ್ಛವಾಗಿ, ನಿರ್ಲಕ್ಷ್ಯ ಭಾವದಿಂದ ಕಾಣುವ ಸಮಾಜದ ಪ್ರವೃತ್ತಿಯಿಂದಾಗಿ ವಿಷಯವನ್ನು ಗೌಪ್ಯವಾಗಿ ಇಡುವಂತೆ ಮಾಡಿದೆ, ಹಾಗೂ ಕಾನೂನಿನ ತೊಡಕೂ ಇದೆ. ಹಾಗಾಗಿ ಇವರ ಮೇಲೆ ನಡೆಯುವ ದೌರ್ಜನ್ಯಗಳು ಎಲ್ಲೂ ಉಲ್ಲೇಖವಾಗುವುದೇ ಇಲ್ಲ. ಮಡಿವಂತಿಕೆ ನಿರ್ಲಕ್ಷ್ಯ ಧೋರಣೆ ಹಾಗೂ ನಕಾರಾತ್ಮಕ ಪ್ರವೃತ್ತಿ ಅವರನ್ನು ಮುಖ್ಯವಾಹಿನಿಯಿಂದ ಭಿನ್ನರಾಗಿ ಉಳಿಯುವಂತೆ ಮಾಡಿದೆ. ಹಾಗಾಗಿ ಇವರೆಲ್ಲರ ಮುಖ್ಯ ಬೇಡಿಕೆ ನಮಗೆ ಎಲ್ಲರಂತೆ ಬಾಳ್ವೆ ನಡೆಸಲು ಅವಕಾಶ ಕೊಡಿ ಹಾಗೂ ನಾವು ಒಪ್ಪಿಕೊಂಡಿರುವ ಸಂಬಂಧಕ್ಕೆ ಮಾನ್ಯತೆ ಕೊಡಿ ಎಂಬುದೇ ಆಗಿತ್ತು.

ಸಲಿಂಗ ಕಾಮವನ್ನು ಅಪರಾಧೀಕರಣಗೊಳಿಸುವ ಸೆಕ್ಷನ್ 377 ನ್ನು ತೆಗೆದುಹಾಕಿ, ಭಯ ಹಾಗೂ ಅವಮಾನವಿಲ್ಲದೆ ನಾವು ಇಚ್ಛಿಸಿದ ಲೈಂಗಿಕತೆ ಪಡೆಯುವ ಹಕ್ಕನ್ನು ನೀಡಿ ಎಂದು ಒತ್ತಾಯಿಸಿದರು.

ಮಹಿಳೆಯರ ವಿರುದ್ಧ ಅಪರಾಧಗಳು ಮಾತ್ರ ಹೆಚ್ಚುತ್ತಲೇ ಇದೆ. ಅವನ್ನು ವಿಂಗಡಿಸಿ ಹೇಳಬೇಕೆಂದರೆ ವರ್ಷಕ್ಕೆ ಸರಾಸರಿ 9800 ಅತ್ಯಾಚಾರದ ಪ್ರಕರಣಗಳು, 20,600 ಕಿರುಕುಳದ ಪ್ರಕರಣಗಳು, ವರದಕ್ಷಿಣೆ ಸಾವು. 5100, ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆ ಇತ್ಯಾದಿಗಳೆಲ್ಲಾ ಸೇರಿ 10,250 ಪ್ರಕರಣಗಳು. ರಾಷ್ಟ್ರೀಯ ಅಪರಾಧ ದಾಖಲೆಗಳ ವರದಿ ಪ್ರಕಾರ ಪ್ರತಿ 5 ನಿಮಿಷಗಳಿಗೊಮ್ಮೆ ಮಹಿಳೆಯರ ಮೇಲೆ ಅಪರಾಧ ಎಸಗಲಾಗುತ್ತಿದೆ. ಇದು ಬೆಳಕಿಗೆ ಬರುವ ಪ್ರಕರಣಗಳ ಅಂಕಿ ಅಂಶ. ಒಳಗೊಳಗೇ ಅಪರಾಧಗಳೆಷ್ಟೋ ಆಗುತ್ತಿರುತ್ತವೆ.

ಕಾಡುಗುಡಿ ಸ್ವಸಹಾಯ ಗುಂಪುಗಳ ವಾರ್ಷಿಕೋತ್ಸವ

ದಿನಾಂಕ 8-7-2001 ರಂದು ಕಾಡುಗೋಡಿಯ ಪಂಚಾಯತ್ ಆಫೀಸಿನಲ್ಲಿ ವಿಕಾಸ ಹಾಗೂ ಶಕ್ತಿ ಸ್ವಸಹಾಯ ಗುಂಪುಗಳ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ 'ಮಾನಸ' ಗೆಳತಿಯರಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿಕಾಸ ಹಾಗೂ ಶಕ್ತಿ ಸ್ವಸಹಾಯಗುಂಪಿನ ಮಹಿಳೆಯರು ಕಾರ್ಯಕ್ರಮದಲ್ಲಿ ತಮ್ಮ ತಮ್ಮ ಅನುಭವವನ್ನು ಎಲ್ಲರ ಮನಮುಟ್ಟುವಂತೆ ಹಂಚಿಕೊಂಡರು.

"ನಾನು ವಿಕಾಸ ಸ್ವಸಹಾಯ ಸಂಘವನ್ನು ಸೇರಿದಾಗ ನನ್ನ ಬದುಕು ಛಿದ್ರಛಿದ್ರವಾಗಿತ್ತು. ನನ್ನ ಮಗಳು ನನ್ನಿಂದ ದೂರವಿದ್ದು ಮತ್ತು ನಾನು ಗಂಡನನ್ನು ಬಿಟ್ಟಿದ್ದೆ. ನಾನು ಬದುಕಬೇಕೆಂಬ ಧೈರ್ಯವನ್ನು ಕಳೆದುಕೊಂಡಿದ್ದೆ. ನಾನು ಈ ಸಂಘಕ್ಕೆ ಸೇರಿದ ನಂತರ ಬದುಕಲೇಬೇಕೆಂಬ ಭಾವನೆ ಚಿಗುರಿತು. ಈಗ ನನ್ನ ಮಗಳು ನನ್ನ ಬಳಿ ಇದ್ದಾಳೆ. ಅವಳಿಗೆ ತಂದೆ-ತಾಯಿ ಇಬ್ಬರು ನಾನಾಗಿಯೇ ಬೆಳೆಸುತ್ತೇನೆ." ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದರು ಪುಷ್ಪ. "ಇದ್ಕೆ ಕಾರಣ ನಾನು ಈ ಸಂಘ ಸೇರಿದ್ದು. ಇನ್ನು ಮುಂದೆಯು ನನಗೆ ಹೆಚ್ಚು ಓದಲು ಮತ್ತು ನನ್ನ ಮಗಳನ್ನು ಓದಿಸಲು ಈ ಸಂಘದಿಂದ ಸಹಾಯವಾಗುತ್ತೆ ಎಂದೂ ನಂಬಿದ್ದೇನೆ." ತನ್ನ ಅಂತರಾಳದ ಇನ್ನು ಅನೇಕ ಭಾವನೆಗಳನ್ನು ಹೇಳಬೇಕೆಂದುಕೊಂಡ ಪುಷ್ಪಳ ಉಸಿರು ಕಟ್ಟಿಸಿತು. ಗದ್ಗರಿಸಿದ ಕಣ್ಣೀರು ಆಕೆಯನ್ನು ಮೌನವಾಗಿಸಿತು.

ವೇದಿಕೆಯ ಕಡೆಗೆ ನಡೆದ ಗೌರಮ್ಮ "ದೊಡ್ಡವರಿಗೆ ಚಿಕ್ಕೋರಿಗೆಲ್ಲರಿಗೂ ನನ್ನ ನಮಸ್ಕಾರಗಳು" ಎನ್ನುತ್ತಾ ಕೈ ಜೋಡಿಸಿ ಮುಗುಳ್ನಗೆಯನ್ನು ಸೂಚಿಸಿದರು. "ನಾನು ಈವತ್ತೇ ಫಸ್ಟ್ ಟೈಮ್ ವೇದಿಕೆಯ ಮೇಲೆ ನಿಂತು ಮಾತಾಡುತ್ತಿರುವುದು. ನನಗೆ ಬೇರೆಯವರಂಗೆ ಚೆನ್ನಾಗಿ ಮಾತಾನಾಡಲು ಬರೋದಿಲ್ಲ ಏಕೆಂದ್ರೇ ನಾನು ಓದಿಲ್ಲ." ಎನ್ನುತ್ತಾ ತಮ್ಮ ಕೈಯಿಂದ ತಲೆಯನ್ನು ಕೆರೆದುಕೊಂಡರು ಮತ್ತೆ ನಕ್ಕರು "ನಾನು ತುಂಬಾ ಹೇಳಬೇಕಂತಿದ್ದೇನೆ. ಆದರೆ ಎಲ್ಲಿ ನಾನು ಅಳ್ತೀನೋ ಅಂತ.....ಒಂದು ಕ್ಷಣ ಸುಮ್ಮನಿದ್ದು ಮತ್ತೆ ನಗುತ್ತಾ 'ನನಗೆ ಈ ಸಂಘದಿಂದ ತುಂಬಾ ಅನುಕೂಲ ಆಗಿದೆ ಇನ್ನು ಮುಂದೆ ನನ್ನ ಮಗಳ ಮದುವೆಗೆ, ಮನೆ ಕಟ್ಟಲು ಇದರಿಂದ ಸಹಾಯ ಆಗುತ್ತೆ ಎಂದುಕೊಂಡಿದ್ದೇನೆ' ಎಂದು ತಾವು ಮೊದಲು ಕುಳಿತಿದ್ದ ಸ್ಥಾನಕ್ಕೆ ನಡೆದರು.

ಉಮಾ ಗುಂಪಿನಿಂದ ಖುದ್ದಾಗಿ ವೇದಿಕೆಯ ಕಡೆಗೆ ನಡೆದುಬಂದು..."ಶಕ್ತಿ ಸಂಘವನ್ನು ಸೇರಿದ್ದರಿಂದ ನಾನು ತುಂಬಾ ಸಂತೋಷ ಪಡುತ್ತಿದ್ದೇನೆ. ನನಗೆ ನಮ್ಮ ಸಂಘವನ್ನು ಸೇರುವುದಕ್ಕೆ ಮೊದಲು ಏನೂ ಇದರ ಬಗ್ಗೆ ಗೊತ್ತಿರಲಿಲ್ಲ. ಆದರೆ ಈ ದಿನ ಎಲ್ಲರೂ ಮಾತಾನಾಡುತ್ತಿದ್ದರೆ ಮತ್ತು ನಾನು ಸ್ವತಃ ನೋಡಿದ್ದೇನೆ. ನಮ್ಮ ಈ ಸಂಘದಿಂದ ಎಲ್ಲರಿಗೂ ಸಹಾಯವಾಗುತ್ತಿದೆ, ಮುಂದೆಯು ಆಗಬೇಕೆಂದು ಬಯಸುತ್ತೇನೆ ಎನ್ನುತ್ತಾ ತಮ್ಮ ಮಾತು ಮುಗಿಸಿದರು.

ಗುಂಪಿನಿಂದ ಮತ್ತೊಬ್ಬ ಈ ಸಂಘದ ಸದಸ್ಯೆಯಾದ ಮಂಜುಳ ಸಹ ತಾನು ಮಾತನಾಡಬೇಕೆಂದು ಬಂದಳು "ನಮ್ಮ ಸಂಬಂಧಿಕಳೇ ಆದ ಪಾರ್ವತಿಯು", ನಾನು ಈ ಸಂಘಕ್ಕೆ ಸೇರಿಕೊಂಡಿದ್ದೇನೆ. ನನಗೆ ತುಂಬಾ ಸಹಾಯವಾಗುತ್ತಿದೆ ನೀನು ಸೇರ್ಕೊ ಅಂತ ಹೇಳಿದ್ದು. ಅವತ್ತು ನಾನು ಇದರ ಬಗ್ಗೆ ಅಸಡ್ಡೆ ಮಾಡಿದೆ. ಆದರೆ ನಾನು ಈ ಸಂಘಕ್ಕೆ ಸೇರಿಕೊಂಡ ಮೇಲೆ ಗೊತ್ತಾಯ್ತು ಇದರಿಂದ ಎಷ್ಟೊಂದೆಲ್ಲ ಅನುಕೂಲ ಇದೆ ಅಂತ. ಇಂಥ ಸಂಘಕ್ಕೆ ಎಲ್ಲ ಹೆಣ್ಣುಮಕ್ಕಳು ಸೇರ್ಕೊಬೇಕು ಮತ್ತೆ ನಾವು ನಮ್ಮ ಈ ಎರಡೇ ಸಂಘಗಳೇ ಅಲ್ಲದೆ ಇನ್ನು ಹೆಚ್ಚು ಹೆಚ್ಚು ಸಂಘಗಳನ್ನು ಕಟ್ಟಬೇಕು" ಎಂದು ಬಹಳ ಉತ್ಸುಕರಾಗಿ ಮಾತನಾಡಿದರು.

ಇವರಂತೆಯೇ ಮುನಿಯಮ್ಮ, ಸರೋಜಮ್ಮ, ತೇಜ, ಇಂದಿರಾ, ವಿಜಯಮ್ಮ, ಪಾರ್ವತಿ, ಸಾವಿತ್ರಮ್ಮ, ಲಕ್ಷ್ಮಿ ಮುಂತಾದವರು ಮಾತನಾಡಿದರು.

ಕೆಲವರು ಅಳುವಿನ ಮೂಲಕ ಪ್ರಾರಂಭಿಸಿದರು, ಕೆಲವರು ನಗುವಿನ ಮೂಲಕ ಪ್ರಾರಂಭಿಸಿ ಅಳುವಿನ ಮೂಲಕ ಮುಗಿಸಿದರು. ಆದರೆ ಎಲ್ಲರ ಮನಸ್ಸಿನಲ್ಲಿಯು ತಾನು ಧೈರ್ಯದಿಂದ ವೇದಿಕೆಯ ಮೇಲೆ ನಿಂತು ಮಾತನಾಡಬಲ್ಲೆ ಎಂಬ ಧೈರ್ಯ ತುಂಬಿದ್ದು ಅವರ ಕಣ್ಣುಗಳ ನೋಟದಿಂದ ತಿಳಿದುಬರುತ್ತಿತ್ತು.

ಈ ರೀತಿ ನಮ್ಮ ಸಂಘದ ಮಹಿಳೆಯರು ಮಾತನಾಡಲು ಕಾರಣ ನಮ್ಮ ಮಾನಸ ಬಳಗದ ಗೆಳತಿಯರಾದ ರಾಜೇಶ್ವರಿ

ಮತ್ತು ವೇದರವರು ನೀಡಿದ ಪ್ರೋತ್ಸಾಹ, ಅವರು ಹುರಿದುಂಬಿಸಿದ ಉತ್ಸಾಹವೇ ಕಾರಣ ಎಂಬುದು ಎಲ್ಲರ ಮಾತುಗಳಲ್ಲಿಯೂ ಕಂಡುಬಂದ ವಿಷಯವಾಗಿತ್ತು.

ಮೊಟ್ಟಮೊದಲಿಗೆ ಕೆಲವು ಸದಸ್ಯರ ಬಳಿ ಮಾನಸದ ರಾಜೇಶ್ವರಿ ಹಾಗೂ ವೇದಾರವರು ಕೆಲವು ತಮ್ಮ ಅಕ್ಕಪಕ್ಕದ ಮನೆಯ ಹೆಂಗಸರನ್ನು ಕರೆದು ನಾವು ಒಂದು ಸಂಘ ಮಾಡೋಣ ಅದರಲ್ಲಿ ವಾರಕ್ಕೆ 10 ರೂ.ಗಳಂತೆ ಉಳಿಸಿ, 1 ವರ್ಷದ ನಂತರ ಅವರ ಹಣವನ್ನೆ ಅವರು ಕಡಿಮೆ ಬಡ್ಡಿಗೆ ಸಾಲವನ್ನು ಪಡೆಯಬಹುದು ಎಂದು ತಿಳಿಸಿದರು. ಆಗ ಎಲ್ಲ ಮಹಿಳೆಯರು ಅಯ್ಯೋ 10-10 ರೂಪಾಯಿ ಕಟ್ಟಿ ಅದು ಗಂಟು ಆಗಿ ನಮ್ಮೆಲ್ರಿಗೂ ಸಾಲ ಸಿಗೋದು ಯಾವಾಗ ಎಂದು ಅಸಡ್ಡೆ ತೋರಿದರು.

ಆದರೂ ಛಲ ಬಿಡದ ರಾಜೇಶ್ವರಿ ಹಾಗೂ ವೇದರವರು ತಮ್ಮ ನೆರೆಹೊರೆಯ ಬಡ ಹೆಂಗಸರಿಗೆ ಸಹಾಯ ಮಾಡಲೇ ಬೇಕೆಂದು ಜೊತೆಗೂಡಿ ಮನೆ-ಮನೆಯ ಬಳಿ ಹೋಗಿ ಎಲ್ಲರನ್ನೂ ಕರೆದು ಬಂದರು. ಕೆಲವರು 10 ರೂ. ಅಷ್ಟೆ ಅಲ್ವಾ ಕಟ್ಟಿದ್ರೆ ಇರುತ್ತೇ ಎಂದು ಬಂದರು, ಕೆಲವರು ಇವರ ಒತ್ತಾಯಕ್ಕೆ ಮಣಿದು ಬಂದರು. ಅಂತು-ಇಂತು ಒಂದು ಸಂಘ ಕಟ್ಟಿದರು. ಈಗ ಈ ಸಂಘ 2 ವರ್ಷಗಳನ್ನು ದಾಟಿದೆ ಜೊತೆಗೆ ಮತ್ತೊಂದು ಹೊಸ ಸಂಘವು ಸ್ಥಾಪನೆಯಾಗಲು ಪ್ರೇರಕವಾಗಿದೆ. ಈಗ ನಮ್ಮ ಈ ಸಂಘದಿಂದ ಅನೇಕರು ಮನೆ ಬಳಕೆಯ ವಸ್ತುಗಳನ್ನು ತೆಗೆದುಕೊಳ್ಳಲು, ಮಾರವಾಡಿಯ ಅಂಗಡಿಯಲ್ಲಿ ಅಡವೆ ಬಿಡಿಸಿಕೊಳ್ಳಲು, ಮನೆ, ಕಟ್ಟಲು ಹಾಗೂ ಮಕ್ಕಳ ಶಾಲೆಯ ಫೀಸು ಕಟ್ಟಲು ಸಾಲ ಪಡೆದುಕೊಂಡಿದ್ದಾರೆ.

ಮುಂದೆ ಇದರಿಂದ ಬೇರೆ ದೊಡ್ಡ ದೊಡ್ಡ ಕಾರ್ಯಗಳಿಗಾಗಿ ಸಾಲ ಪಡೆಯಬೇಕು ಮತ್ತು ತಮ್ಮದೇ ಆದ ಸ್ವಂತ ಕೆಲಸ ಪ್ರಾರಂಭಿಸಲು ಇದರಿಂದ ಅದಕ್ಕೆ ಬೇಕಾದ ಮತ್ತು ಬಂಡವಾಳವನ್ನು ಕುರಿತು ಸಂಘದಲ್ಲಿ ಚರ್ಚಿಸಲಾಗಿದೆ.

ಇದೇ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿದೆವು. ಇದರ ಅಂಗವಾಗಿ ಕಾಡುಗೋಡಿ ನಿವಾಸಿ ಹಾಗೂ ರಾಜ್ಯ ಪ್ರಶಸ್ತಿ ವಿಜೇತರಾದ ಅಂಗನವಾಡಿ ಶಿಕ್ಷಕಿ ಶ್ರೀಮತಿ ನಾಗರತ್ನಮ್ಮನವರನ್ನು ಸನ್ಮಾನಿಸಲಾಯಿತು. ವಿಕಾಸ ಸ್ವಸಹಾಯ ಸಂಘ, ಶಕ್ತಿ ಸ್ವಸಹಾಯ ಎರಡು ಸಂಘಗಳ ಒಮ್ಮತದಿಂದ ಅವರಿಗೆ ಕಿರುಕಾಣಿಕೆ ಇತ್ತು ಮಾಲಾರ್ಪಣೆ ಮಾಡಲಾಯಿತು. ಮಾಲಾರ್ಪಣೆಯನ್ನು ಮಾನಸ ಬಳಗದ ಶ್ರೀಮತಿ ಶಾರದವರು ನಡೆಸಿಕೊಡುವುದರ ಜೊತೆಗೆ ಅಲ್ಲಿ ನೆರೆದಿದ್ದ ಸ್ತ್ರೀಯರಿಗೆ ಅವರ ಸಮಸ್ಯೆಯ ಬಗ್ಗೆ ಸರಳವಾಗಿ ಮನಸ್ಸಿಗೆ ಹಿತವಾಗುವ ಮತ್ತು ಅರ್ಥವಾಗುವಂತಹ ಕೆಲವು ವಿಷಯಗಳನ್ನು ವಿವರಿಸಿದರು. ಮಹಿಳೆಯರು ನಮ್ಮ ಮನೆ ನಮ್ಮ ಮನೆ ಎಂದು ಜೀವ ಬಿಡುತ್ತಾರೆ. ಅದನ್ನು ಸಾರಿಸಿ ಗುಡಿಸಿ ತೊಳೆದು ಪೂರ್ತಿ ಜೀವನವನ್ನು ಮನೆಗೆಲಸದಲ್ಲಿ ಸವೆಸುತ್ತಾರೆ. ಆದರೆ ಆ ಮನೆ ಅವರ ಹೆಸರಿನಲ್ಲಿ ಇರುವುದಿಲ್ಲ. ತವರಲ್ಲಾಗಲೀ ಅತ್ತೆ ಮನೆಯಲ್ಲಾಗಲೀ ಮನೆಯ ತೂತುಗಳನ್ನು ಮುಚ್ಚಿ ಸುಣ್ಣ ಬಣ್ಣ ಮಾಡಿ ಮನೆಯನ್ನು ಕಾಯುವುದು ಮಹಿಳೆ, ಆದರೆ ಅದರ ಹಕ್ಕು ಮಹಿಳೆಗಿರುವುದಿಲ್ಲ. ಅದನ್ನು ಮಾರುವಾಗ ಆಕೆಯ ಮನಸ್ಸಿನಲ್ಲೇನಿದೆ ಎಂದು ಯಾರು ಕೇಳುವುದಿಲ್ಲ, ಅಲ್ಲವೆ? ಎಂದು ಎಲ್ಲರನ್ನು ಪ್ರಶ್ನಿಸುವುದರ ಮೂಲಕ ಮಹಿಳೆಗೆ ಸಿಗುತ್ತಿರುವ ಮತ್ತು ಸಿಗದಿರುವಂತಹ ಹಕ್ಕು, ಅವಕಾಶಗಳ ಬಗ್ಗೆ ಮಾತನಾಡಿದರು.

ಹೀಗೆ ಇನ್ನೂ ಅನೇಕ ಉದಾಹರಣೆಗಳನ್ನು ಹೇಳುವುದರ ಮೂಲಕ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಎಲ್ಲರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಂಡು ಮಾತನಾಡಿದರು.

ಅನಂತರ ಕಾರ್ಯಕ್ರಮಕ್ಕೆ ಕಳೆ ತಂದುಕೊಟ್ಟಂತೆ ಮಾನಸ ಸದಸ್ಯರಾದ ಶ್ರೀಮತಿ ರಾಜೇಶ್ವರಿಯವರು ಸ್ವಸಹಾಯ ಸಂಘವನ್ನು ಕುರಿತಂತೆ ಬರೆದ "ಒಂದಾಗಿ ಮುಂದಾಗಿ" ಹೋಗೋಣ ಬನ್ನಿ. ಹಾಡನ್ನು ಸಂಘದ ಯುವತಿಯರು ಸೊಗಸಾಗಿ ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಮೆರಗನ್ನು ತಂದರು.

ನಂತರ ಮಾನಸದ ಗೆಳತಿಯರಾದ ಸರಸ್ವತಿ ಮತ್ತು ಚಿತ್ರರವರು "ರೆಕ್ಕೆ ಕಟ್ಟುವಿರಾ" ಎಂಬ ನಾಟಕವನ್ನು ಮಾಡುವುದರ ಮೂಲಕ ಎಲ್ಲರ ಅಂತರಾಳವನ್ನು ಕಲಕಿದರು. ಮತ್ತೊಬ್ಬ ಮಾನಸ ಗೆಳತಿಯಾದ ಪುಷ್ಪ ಮನೆಯಿಂದ ಬರುವಾಗ ಅರುವತ್ತು ಜನ ಮಹಿಳೆಯರಿಗೆ ಸಾಕಾಗುವಂತೆ ಸಿಹಿಯನ್ನು ಹೊತ್ತು ತಂದಿದ್ದರು. ಅದನ್ನು ಶಕ್ತಿ ಸ್ವಸಹಾಯ ಸಂಘ, ವಿಕಾಸ ಸ್ವಸಹಾಯ ಸಂಘದ ಸದಸ್ಯರೆಲ್ಲರಿಗೂ ಮಾನಸ ಗೆಳೆತಿಯರಾದ ಸವಿತ, ಗೀತಾ, ಶಕೂನ್, ಸರಸ್ವತಿ, ಚಿತ್ರ, ಶಾರದ, ವೇದ, ರಾಜೇಶ್ವರಿ, ಶ್ಯಾಮಲ, ಲಕ್ಷ್ಮಿ ಹಂಚುವುದರ ಮೂಲಕ ಸಿಹಿಯ ಸವಿ ಎಲ್ಲಾ ಕಾಲವು ಮಹಿಳೆಯರು ಹೀಗೆ ಒಂದುಗೂಡುವುದರಲ್ಲಿ ಇರಲಿ ಎಂದು ಹರಸಿದರು.

ಸಮಾರಂಭದ ಕೊನೆಯಲ್ಲಿ ಸಂಘದವರಿಂದ ಏರ್ಪಡಿಸ ಲಾಗಿದ್ದ ಉಪಾಹಾರವನ್ನು ಸೇವಿಸಿ ಎಲ್ಲ ಸದಸ್ಯರು ಸಮಾರಂಭ ಮತ್ತು ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡುತ್ತಾ ಅವರವರ ಮನೆಗಳ ಕಡೆ ತಮ್ಮ ಹೆಜ್ಜೆಗಳನ್ನು ಹಾಕುತ್ತಾ ನಡೆದರು.

✍ ಲಕ್ಷ್ಮಿ ಎ. ವೇದ

ಒಂದಾಗಿ.... ಮುಂದಾಗಿ....

ಒಂದಾಗಿ ಮುಂದಾಗಿ ಜೊತೆಯಾಗಿ ಬನ್ನಿ
ಸಮಯಕ್ಕೆ ಸರಿಯಾಗಿ ಹೋಗೋಣ ಬನ್ನಿ ||

ಮನೆಯೊಳಗೆ ಮನೆಹೊರಗೆ ದುಡಿವವರು ನಾವು
ದುಡಿದುಡಿದು ದುಡಿದುಡಿದು ನೊಂದವರು ನಾವು
ಕಣ್ಣಿಗೆ ಕಾಣದಲ್ಲ ನಮ್ಮ ಈ ದುಡಿಮೆ
ಕಾಸಿನ ಕಿಮ್ಮತ್ತು ನಮ್ದುಡಿಮೆಗಿಲ್ಲ ||ಒಂದಾಗಿ||

ಗಳಿಸಿಟ್ಟ ಉಳಿಸಿಟ್ಟ ಕೂಡಿಟ್ಟ ಕಾಸು
ಸಾಸಿವೆ ಡಬ್ಬದಲ್ಲಿ ಬಚ್ಚಿಟ್ಟ ಕಾಸು
ಸೀರೆಯ ಮಡಿಕೆಯಲಿ ಮುಚ್ಚಿಟ್ಟ ಕಾಸು
ಗಂಡನಿಗೆ ಸುಳ್ಳೇಳಿ ಉಳಿಸಿಟ್ಟ ಕಾಸು ||ಒಂದಾಗಿ||

ಮಕ್ಕಳ ಬಾಯಿಕಟ್ಟಿ ಉಳಿಸಿಟ್ಟ ಕಾಸು
ತರಕಾರಿ ಕೊಳ್ಳದೆ ಉಳಿಸಿಟ್ಟ ಕಾಸು
ಕಾಯಿಲೆ ಬಿದ್ದರೂ ಕರಗದಾ ಕಾಸು
ಹೊಸಬಟ್ಟೆ ಹೊಲಿಸದೆ ಮಿಗಿಸಿಟ್ಟ ಕಾಸು ||ಒಂದಾಗಿ||

ಮುತ್ತಿನ ಮೂಗಬಟ್ಟು ಬೆಂಡೋಲೆ ಜುಂಕಿ
ಅವ್ವ ಕೊಟ್ಟೆರೆಡೆಳೆ ಚಿನ್ನದ ಚೈನು
ಮಾರ್ವಾಡಿ ಅಂಗಡಿಯ ಸೇರಿದ್ದವಲ್ಲ
ಬಡ್ಡಿಯ ಭೂತಕ್ಕೆ ಬಲಿಯಾದವೆಲ್ಲ ||ಒಂದಾಗಿ||

ಕರೆಯದೆ ಮರೆಯದೆ ಹೋಗೋಣ ಬನ್ನಿ
ಸಂಘದ ನಮ್ಮ ಸಭೆಯ ನಡೆಸೋಣ ಬನ್ನಿ
ಕಾಸಿನ ಬೀಜವ ಬಿತ್ತೋಣ ಬನ್ನಿ
ಸಮಬಾಳು, ಸಮಪಾಲು ಪಡೆಯೋಣ ಬನ್ನಿ||ಒಂದಾಗಿ||

ರಾಜೇಶ್ವರಿ ಎಚ್. ಎಸ್.

ಓ ಕಾಲವೇ ನಿನ್ನಲ್ಲಿ ನನ್ನದು ಎಷ್ಟು?

ಓ ಕಾಲವೇ ನಿನ್ನಲ್ಲಿ ನನ್ನದು ಎಷ್ಟು!
ಹೀಗೆ ನಿತ್ಯ ಕೇಳಿಕೊಳ್ಳುವ ವಿನಯದ ಮಾತಿನಲ್ಲಿ
ಸತ್ವದ ಕುರುಹು ಇಲ್ಲದಿಲ್ಲ
ಕುಟ್ಟಿ ಬೀಸಿ ಕೇರಿ ಸೋಸಿ
ತೆಗೆದ ಅಕ್ಕಿಯ ನುಚ್ಚಿನಂತೆ
ಪುಡಿ ಪುಡಿಯಾಗಿಯೆ ಹೋಗುವ ಕಾಲವೇ
ನಿನ್ನ ಗಂಟಿನಲ್ಲಿ ನನ್ನದಾಗುವ ದಿನಗಳು
ಉಳಿಯುವುದಾದರೂ ಹೇಗೆ ಹೇಳು!

ಕಟ್ಟಿಕೊಳ್ಳುವ ಕನಸುಗಳಂತೆ
ಎಳೆ ಎಳೆಯಾಗಿ ಬಿಚ್ಚಿಕೊಂಡು
ರೂಪತಾಳಿ ಇದ್ದಕ್ಕಿದ್ದಂತೆ ನಿರಾಕಾರವಾಗಿ
ಎಲ್ಲವೂ ಇದ್ದು ಇಲ್ಲವಾಗಿ ಬಿಡುವ,
ನವ್ಯಕಲೆಯಂತೆ

ಸೂಕ್ಷ್ಮದಲ್ಲಿ ಅತಿ ಸೂಕ್ಷ್ಮವಾಗುವ
ನನ್ನ ಕಾಲ ಎನ್ನುವ ಮಾತು!
ಇಲ್ಲಿ ಗೆಳೆಯರಿಗೆ ಜಾಗ ನೀಡಲಾಗುತ್ತಿಲ್ಲ
ಗೆಳತಿಯರೋ ಸರಿಯಾಗಿ ಕೇಳಿಸಿಕೊಳ್ಳುತ್ತಿಲ್ಲ
ಎಲ್ಲವೂ ಹೂದಾನಿಯ ಕುಸುಮಗಳಂತೆ.

ಇಡಬೇಕಾದ ವಿರಾಮಕ್ಕೆ ಮುನ್ನ
ಅಲ್ಪವಿರಾಮದೊಳಗೆ ಮುಂದುವರೆಯುವ
ವಾಕ್ಯವಾಗಿ ಕಾಲ ನನ್ನ ಮತ್ತು ನನ್ನೊಳಗಿನ
ಕನಸುಗಳನ್ನು ಮುಂದೂಡುತ್ತದೆ.

ಕೊನೆಗೂ ಅದು ತನ್ನ ಮಾಪನದಲ್ಲಿ
ನಿರ್ಧಿಷ್ಟವಾಗಿ ನನ್ನದೆನ್ನುವುದನ್ನು
ಅಳೆದು ತೋರಲು ಸೋತು ಹೋಗುತ್ತದೆ.

ಇತಿಹಾಸದ ಸಾಕ್ಷಿಗಳನ್ನು ಒದಗಿಸಿ
ಭೂತಕ್ಕೆ ಉಯ್ಯಾಲೆ ಕಟ್ಟಿ ವರ್ತಮಾನವನ್ನು ಅಳೆಯುತ್ತದೆ
ಮುಂದೆ ಅದೇ ಮಾಪಕವನ್ನು ಭವಿಷ್ಯತ್ತಿನೊಂದಿಗೆ
ಜೋಡಿಸಿ ಕೈ ಮುಗಿಯುತ್ತದೆ
ನನ್ನ ಕಾಲದ ಶೋಧಕ್ಕೆ ವಿರಾಮ ಹಾಕುತ್ತದೆ.

ಡಾ. ಆರ್. ಸುನಂದಮ್ಮ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067